# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 05, 2021

ಸಂಪುಟ : 47 ಸಂಚಿಕೆ : 277 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



**LUMBINI INSTITUTE OF PARA MEDICLE SCIENCE COLLEGE, DAVANGERE**

**Hury Up... Last Date For Admission: 15.02.2021**

1) Diploma in Health Inspector (DSHI) 2) Diploma in Laboratory Technology (DMLT)
3) Diploma in Operation Theater & Anastesia Technology (DOT & AT) 4) Diploma in Opthamolic Technology (DOT)

Contact Us: LUMBINI INSTITUTE OF PARA MEDICLE SCIENCE COLLEGE, DAVANGERE. 7019586789, 6360491454, 9902055335

LECTURER'S WANTED

MSc NURSING | MSc BIOCHEMISTRY | MSc PATHOLOGY


# ಕಾಡು ಪ್ರಾಣಿಗಳ ಕಾಟಕ್ಕೆ ಕಳವಳ

## ಸರ್ಕಾರದ ಕ್ರಮ, ಪರಿಹಾರಕ್ಕೆ ಪಕ್ಷಭೇದ ಮರೆತು ಒತ್ತಾಯ

ಬೆಂಗಳೂರು, ಫೆ.4 - ಹುಲಿ, ಚಿರತೆ, ಆನೆ, ಕಾಡು ಹಂದಿಗಳ ಕಾಟದ ಬಗ್ಗೆ ವಿಧಾನಸಭೆಯಲ್ಲಿ ಪಕ್ಷಭೇದವಿಲ್ಲದೇ ಸದಸ್ಯರು ಕಳವಳ ವ್ಯಕ್ತಪಡಿಸಿದ್ದಾರಲ್ಲದೇ, ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಆಕ್ಷೇಪಿಸಿದ್ದಾರೆ.



ಪ್ರಶ್ನೋತ್ತರ ವೇಳೆಯಲ್ಲಿಂದು ಸದಸ್ಯ ಹರತಾಳು ಹಾಲಪ್ಪ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಪಕ್ಷಭೇದವಿಲ್ಲದೆ ಎಲ್ಲ ಪಕ್ಷಗಳ ಶಾಸಕರು ಎದ್ದು ನಿಂತು ತಮ್ಮ ಕ್ಷೇತ್ರಗಳಲ್ಲಿ ವಿಪರೀತವಾಗುತ್ತಿರುವ ಚಿರತೆ, ಹುಲಿ, ಆನೆ, ಕಾಡು ಹಂದಿಗಳ ಹಾವಳಿ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಶಿವಮೊಗ್ಗ, ಮಂಡ್ಯ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು ಸೇರಿದಂತೆ ಹಲವು ಜಿಲ್ಲೆಗಳ ಶಾಸಕರು, ಕಾಡು ಪ್ರಾಣಿಗಳ ಹಾವಳಿಯಿಂದ ಜನಜೀವನ ಸಂಕಷ್ಟಕ್ಕೆ ಸಿಲುಕಿದೆ, ಕ್ರಮ ಕೈಗೊಳ್ಳಬೇಕಾದ ಸರ್ಕಾರ ಏನೂ ಮಾಡುತ್ತಿಲ್ಲ, ಹಾನಿಗೆ ಪರಿಹಾರವನ್ನೂ ನೀಡುತ್ತಿಲ್ಲ ಎಂದು ನೋವು ತೋಡಿಕೊಂಡರು.

ಸದಸ್ಯ ಹರತಾಳು ಹಾಲಪ್ಪ ಮಾತನಾಡಿ, ನನ್ನ ಕ್ಷೇತ್ರ ವ್ಯಾಪ್ತಿಯ ಕರೂರು ಮತ್ತಿತರ ಕಡೆ ಹುಲಿ, ಚಿರತೆಗಳ ಹಾವಳಿ ಶುರುವಾಗಿದೆ, ಬೇರೆ ಜಿಲ್ಲೆಗಳಲ್ಲಿ ಇದರ ಹಾವಳಿ ಹೆಚ್ಚಿದಾಗ ಅವನ್ನು ಹಿಡಿದು ನಮ್ಮಲ್ಲಿಗೆ ತಂದು ಬಿಡುತ್ತಿದ್ದಾರೆ ಎಂಬ ವದಂತಿ ಹಬ್ಬಿದೆ ಎಂದು ನುಡಿದರು.

ಈ ವಿಷಯದಲ್ಲಿ ಸರ್ಕಾರ ಗಂಭೀರ ಕ್ರಮ ಕೈಗೊಳ್ಳುತ್ತಿಲ್ಲ, ಪರಿಹಾರವನ್ನೂ ನೀಡುತ್ತಿಲ್ಲ, ಇನ್ನು ಹಂದಿಗಳ ಕಾಟವಂತೂ ಮೇರೆ ಮೀರಿದೆ, ಗುಂಪು ಗುಂಪಾಗಿ ನುಗ್ಗುವ ಹಂದಿಗಳು ರೈತರು ಬೆಳೆದ ಬೆಳೆಯನ್ನು ನಾಶ ಪಡಿಸುತ್ತಿವೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಸರ್ಕಾರವೇ ಅವುಗಳನ್ನು ನಿಯಂತ್ರಿಸಬೇಕು, ಇಲ್ಲವೇ ಕೊಡಗು ಜಿಲ್ಲೆಯಲ್ಲಿರುವಂತೆ ಹಂದಿಗಳ ಹಾವಳಿ ತಡೆಯಲು ಬಂದೂಕು ಬಳಸಲು ಪರವಾನಗಿ ನೀಡಬೇಕು ಎಂದರು.

ಮಳವಳ್ಳಿ ಶಾಸಕ ಅನ್ನದಾನಿ ಮಾತನಾಡಿ, ನನ್ನ ಕ್ಷೇತ್ರದ ಮಲೇ ಮಹದೇಶ್ವರ ಬೆಟ್ಟದಿಂದ ಹಿಡಿದು ಮೂರು ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿದ್ದು ಹುಲಿ, ಚಿರತೆ, ಆನೆ, ಕಾಡು ಹಂದಿಗಳ ಹಾವಳಿ ವಿಪರೀತವಾಗಿದೆ ಎಂದರು.

ಇದಕ್ಕೆ ಧ್ವನಿಗೂಡಿಸಿದ ಶಾಸಕ ಹೆಚ್.ಕೆ.ಕುಮಾರಸ್ವಾಮಿ, ನನ್ನ ಕ್ಷೇತ್ರದಲ್ಲಿ ಐದು ಮಂದಿ ಕಾಡಾನೆಗಳ ತುಳಿತದಿಂದ ಮೃತಪಟ್ಟಿದ್ದಾರೆ. ಇದೇ ರೀತಿ ವನ್ಯಮೃಗಗಳ (2ನೇ ಪುಟಕ್ಕೆ)

# ತಾಲ್ಲೂಕು ಪಂಚಾಯ್ತಿಗೆ ತೆರೆ

## ಗ್ರಾ.ಪಂ., ಜಿ.ಪಂ. ಸೇರಿ ಎರಡು ಹಂತದ ಪಂಚಾಯ್ತಿ ವ್ಯವಸ್ಥೆಗೆ ಒಲವು

ಬೆಂಗಳೂರು, ಫೆ.4 - ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಿರುವ ತಾಲ್ಲೂಕು ಪಂಚಾಯತ್ ವ್ಯವಸ್ಥೆಯನ್ನು ರದ್ದುಗೊಳಿಸಲು ಸರ್ಕಾರ ಮುಂದಾಗಿದೆ.

ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ವಿಧಾನಸಭೆಯಲ್ಲಿಂದು ಸ್ವಯಂಪ್ರೇರಿತ ಹೇಳಿಕೆ ನೀಡಿ, ತಾಲ್ಲೂಕು ಪಂಚಾಯತ್ ರದ್ದುಪಡಿಸುವ ಪ್ರಸ್ತಾಪ ಮುಂದಿಟ್ಟರು.

ಪ್ರಶ್ನೋತ್ತರ ವೇಳೆಯಲ್ಲಿ ವೆಂಕಟರಾವ್ ನಾಡಗೌಡ ಮತ್ತಿತರರ ಪ್ರಸ್ತಾಪಕ್ಕೆ ಉತ್ತರಿಸುವ ಸಂದರ್ಭದಲ್ಲಿ ಮಾತನಾಡಿದ ಅವರು, ಜಿಲ್ಲಾ ಮತ್ತು ಗ್ರಾಮ ಪಂಚಾಯತ್‌ಗಳು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿವೆ, ಆದರೆ ತಾಲ್ಲೂಕು ಪಂಚಾಯತ್‌ನಿಂದ ಇಂತಹ ಸಾಧನೆಗಳನ್ನು ಮಾಡಲಾಗುತ್ತಿಲ್ಲ ಎಂದರು.

ತಾಲ್ಲೂಕು ಪಂಚಾಯತ್‌ಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಈ ಬಾರಿ ಬಹುತೇಕ ಅಭ್ಯರ್ಥಿಗಳು ತಾಲ್ಲೂಕು ಪಂಚಾಯತ್‌ಗಳ ಬದಲು ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾರೆ. ತಾಲ್ಲೂಕು ಪಂಚಾಯತ್ ವ್ಯವಸ್ಥೆ ರದ್ದು ಕುರಿತು ಶಾಸಕರು ಮತ್ತಷ್ಟು ವಿವರವಾದ ಅಭಿಪ್ರಾಯ ನೀಡಿದರೆ ಸರ್ಕಾರ ಮುಂದಿನ ಹೆಜ್ಜೆ ಇಡಲು ಅನುಕೂಲವಾಗುತ್ತದೆ ಎಂದು ಸಚಿವ ಈಶ್ವರಪ್ಪ ವಿವರಿಸಿದರು.

> **ಎರಡನೇ ವ್ಯವಸ್ಥೆಯೇ ಹೊರೆಯಾಗಿದೆ, ಯಾರಿಗೂ ಬೇಡವಾದ ಈ ವ್ಯವಸ್ಥೆಯನ್ನು ಸದನ ಒಪ್ಪಿದಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಿ ರಾಜ್ಯದಲ್ಲಿ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಉಳಿಸಿಕೊಳ್ಳಲಾಗುವುದು.**
>
> - ಕೆ.ಎಸ್.ಈಶ್ವರಪ್ಪ, ಪಂಚಾಯತ್ ರಾಜ್ ಸಚಿವ

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳು ಕೇಂದ್ರದ ಕಾನೂನಿನ ಮೂಲಕ ಅಸ್ತಿತ್ವಕ್ಕೆ ಬಂದಿವೆ, ಆದ್ದರಿಂದ, ಮೂರೂ ಹಂತಗಳ ಪಂಚಾಯತ್ ವ್ಯವಸ್ಥೆಯನ್ನು ಎರಡು ಹಂತಗಳಿಗೆ ಇಳಿಸಬೇಕು ಎಂಬ ಬಗ್ಗೆ ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ದೇಶದ ಬಹುತೇಕ ರಾಜ್ಯಗಳಲ್ಲಿ ಪಂಚಾಯತ್ ವ್ಯವಸ್ಥೆ ಅಸ್ತಿತ್ವದಲ್ಲಿದೆ, 20 ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಇರುವ ರಾಜ್ಯಗಳಿಗೆ ಮಾತ್ರ ಪಂಚಾಯತ್ ರಾಜ್ ವ್ಯವಸ್ಥೆಯಿಂದ ವಿನಾಯಿತಿ ಇದೆ.

ತಾಲ್ಲೂಕು ಪಂಚಾಯತ್ ವ್ಯವಸ್ಥೆ ರದ್ದು ಕುರಿತು ಸಚಿವ ಸಂಪುಟ ಸಭೆಯಲ್ಲಿ ವಿವರವಾಗಿ ಚರ್ಚಿಸಿದ್ದೇವೆ, ಶಾಸಕರೂ ತಮ್ಮ ಅಭಿಪ್ರಾಯ ತಿಳಿಸಿದರೆ ಮತ್ತೆ ಸಚಿವ ಸಂಪುಟದ ಮುಂದಿಟ್ಟು ತೀರ್ಮಾನ ಕೈಗೊಳ್ಳಲಾಗುವುದು. ತಾಲ್ಲೂಕು ಪಂಚಾಯತ್ ವ್ಯವಸ್ಥೆ ರದ್ದುಗೊಳಿಸಿ ಎರಡು ಹಂತಗಳ ಪಂಚಾಯತ್ ವ್ಯವಸ್ಥೆ ಅನುಷ್ಠಾನಗೊಳಿಸಲು ಕೇಂದ್ರಕ್ಕೆ ಶಿಫಾರಸು ಮಾಡಲಾಗುವುದು ಎಂದು ವಿವರಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಸದಸ್ಯ ವೆಂಕಟರಾವ್ ನಾಡಗೌಡ, ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆ ಪರಿಣಾಮಕಾರಿಯಾಗಿಲ್ಲ, ತಾಲ್ಲೂಕು ಪಂಚಾಯತ್‌ಗಳಂತೂ ಪರಿಣಾಮಕಾರಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ, ಇಂತಹ ಪರಿಸ್ಥಿತಿಯಲ್ಲಿ ತಾಲ್ಲೂಕು ಪಂಚಾಯತ್‌ಗಳನ್ನು ರದ್ದುಪಡಿಸಿ ಎರಡು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ತರಬೇಕು ಎಂದು ಹೇಳಿದರು.




**ಮೀನು ಬೇಟೆ** ದಾವಣಗೆರೆ ಸಮೀಪದ ಕುಂದುವಾಡ ಕೆರೆಯನ್ನು ಅಭಿವೃದ್ಧಿ ಮಾಡಲು ಕೆರೆ ಬರಿದು ಮಾಡಲಾಗುತ್ತಿದ್ದು, ಕೆರೆಯಲ್ಲಿ ಉಳಿದ ಅಲ್ಪ ನೀರಿನಲ್ಲಿರುವ ಮೀನುಗಳನ್ನು ಹಿಡಿಯಲು ಬಲೆ ಯೊಂದಿಗೆ ಹೆಜ್ಜೆ ಹಾಕುತ್ತಿರುವ ಮೀನುಗಾರರು.

# ನ್ಯಾಯಾಲಯದ ಆವರಣದಲ್ಲೇ ಭಗವಾನ್ ಮುಖಕ್ಕೆ ಮಸಿ



ಬೆಂಗಳೂರು, ಫೆ. 4 - ಹಿಂದೂ ಧರ್ಮ ಹಾಗೂ ದೇವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪ ಎದುರಿಸುತ್ತಿರುವ ವಿಚಾರವಾದಿ ಕೆ. ಎಸ್. ಭಗವಾನ್ ಅವರ ಮುಖಕ್ಕೆ ಮಸಿ ಬಳಿಯಲಾಗಿದೆ.

ಹಿಂದೂ ವಿರೋಧಿ ಹೇಳಿಕೆ ಸಂಬಂಧ ವಿಚಾರಣೆಗಾಗಿ ಹಾಜರಾಗಿದ್ದ ಭಗವಾನ್, ಜಾಮೀನು ಪಡೆದುಕೊಂಡಿದ್ದರು. ನಂತರ ಹೊರ ಬರುವಾಗ ವಕೀಲೆ ಮೀರಾ ರಾಘವೇಂದ್ರ ಎಂಬುವರು ಮಸಿ ಬಳಿದಿದ್ದಾರೆ.

ಈ ಘಟನೆಯಿಂದಾಗಿ ಕೆಲ ಕಾಲ ತಬ್ಬಿಬ್ಬಾದ ಭಗವಾನ್ ಅವರನ್ನು ಕೂಡಲೇ ಅವರ ಸಂಗಡಿಗರು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು.

ಮಸಿ ಬಳಿಯುವ ವೇಳೆ ಭಗವಾನ್ ಅವರನ್ನು ತರಾಟೆಗೆ ತೆಗೆದುಕೊಂಡ ವಕೀಲೆ ಮೀರಾ ರಾಘವೇಂದ್ರ, ಹಿಂದೂ ಧರ್ಮದ ಬಗ್ಗೆ ಇಲ್ಲಸಲ್ಲದ ಹೇಳಿಕೆ ಏಕೆ ನೀಡುತ್ತೀರಿ ಎಂದು ತರಾಟೆಗೆ ತೆಗೆದುಕೊಂಡ ವಿಡಿಯೋ ವೈರಲ್ ಆಗಿದೆ.


ನಂತರ ಟ್ವೀಟ್ ಮಾಡಿರುವ ಮೀರಾ ರಾಘವೇಂದ್ರ, ಬುದ್ಧಿಜೀವಿ, ಧರ್ಮ ವಿರೋಧಿ ಪ್ರೊ. ಭಗವಾನ್ ಅವರು ಕೋರ್ಟ್ ಕಟಕಟೆಗೆ ಹಾಜರಾಗಿ ಜಾಮೀನು ಪಡೆದುಕೊಂಡರು. ಬಳಿಕ (2ನೇ ಪುಟಕ್ಕೆ)

# ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ನಿಖಿಲ್ ಕೊಂಡಜ್ಜಿ

## ಉಪಾಧ್ಯಕ್ಷರಾಗಿ ಎಲ್.ಎಂ.ಹೆಚ್. ಸಾಗರ್

ದಾವಣಗೆರೆ, ಫೆ. 4- ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಹರಿಹರ ತಾಲ್ಲೂಕಿನ ನಿಖಿಲ್ ಕೊಂಡಜ್ಜಿ 1,838 ಮತಗಳನ್ನು ಗಳಿಸಿ ಆಯ್ಕೆಯಾಗಿದ್ದಾರೆ.

ನಗರದ ಎಂ.ಎಲ್.ಹೆಚ್. ಸಾಗರ್ 1,785 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಳಿದಂತೆ ಹೊನ್ನಾಳಿಯ ಹೆಚ್.ಎಸ್. ರಂಜಿತ್ (1012), ದಾವಣಗೆರೆಯ ಮುಜಾಹಿದ್ ಪಾಷಾ (890), ಖಾಲಿದ್ ಪೈಲ್ವಾನ್ (491), ಮಹಮ್ಮದ್ ವಾಜೀದ್ (465), ಮೊಹಮ್ಮದ್ ಸಿದ್ದೀಕ್ (133), ಜೆ.ಹೆಚ್. ವಿನಯಕುಮಾರ್ (116), ಮೊಹಮ್ಮದ್ ಇಮ್ರಾನ್ (94) ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ಶಂಭು ಅತಿ ಕಡಿಮೆ ಮತ ಪಡೆದು ಸಮಿತಿಯಿಂದ ಹೊರಗುಳಿದಿದ್ದಾರೆ.



ನಿಖಿಲ್ ಕೊಂಡಜ್ಜಿ



ಎಂ.ಎಲ್.ಹೆಚ್. ಸಾಗರ್

**ಆನ್‌ಲೈನ್ ಮತದಾನ:** 3 ವರ್ಷಗಳ ಅವಧಿಗೆ ನಡೆಯುವ ಚುನಾವಣಾ ಪ್ರಕ್ರಿಯೆ ಈ ಬಾರಿ ಸಂಪೂರ್ಣ ಆನ್‌ಲೈನ್ ಮತದಾನದ ಮೂಲಕ ನಡೆದಿತ್ತು. ಐವೈಸಿ (ಇಂಡಿಯನ್ ಯೂತ್ ಕಾಂಗ್ರೆಸ್) ಆಪ್ ಸಿದ್ಧಗೊಂಡಿತ್ತು. ಮತದಾನ ಮಾಡಲು ಅರ್ಹರಾಗಿದ್ದ ಯುವ ಕಾಂಗ್ರೆಸ್ ಸದಸ್ಯರು ತಮ್ಮ ಮೊಬೈಲ್ ಮೂಲಕವೇ ಮತದಾನ ಮಾಡಿದ್ದರು.

ಪಕ್ಷದೊಳಗಿನ ಹುದ್ದೆಗಾಗಿ ಸ್ವಪಕ್ಷೀಯ ನಾಯಕರೇ ಎದುರಾಳಿಗಳಾಗಿ ಸ್ಪರ್ಧಿಸಿದ್ದ ಈ ಚುನಾವಣೆಯು ಕಳೆದ ಜನವರಿ 12 ರಂದು ನಡೆದಿತ್ತು. ಜಿಲ್ಲಾ ಘಟಕದ ಅಧ್ಯಕ್ಷ ಹುದ್ದೆಗೆ 10 ಮಂದಿ ಸ್ಪರ್ಧೆ ಮಾಡಿದ್ದರೂ ಅವರು ಮತ ಪಡೆಯುವ ಸಂಖ್ಯೆಗೆ ಅನುಗುಣವಾಗಿ ಉಪಾಧ್ಯಕ್ಷ, ಕಾರ್ಯದರ್ಶಿ ಹುದ್ದೆಗಳನ್ನು ಪಡೆದಿದ್ದಾರೆ.

ಅತೀ ಹೆಚ್ಚು ಮತ ಪಡೆದವರು ಜಿಲ್ಲಾ ಘಟಕದ (2ನೇ ಪುಟಕ್ಕೆ)

# ಪೊಲೀಸ್ ಇಲಾಖೆಯ ಮಾಹಿತಿ, ಸೌಲಭ್ಯಗಳ ವೆಬ್‌ಸೈಟ್ ಜಾರಿಗೆ

ದಾವಣಗೆರೆ,ಫೆ.4- ಗೃಹ ಮಂತ್ರಾಲಯ, ಕರ್ನಾಟಕ ಸರ್ಕಾರವು ರಾಜ್ಯದ ಸಾರ್ವಜನಿಕರಿಗೆ ಅನುಕೂಲವಾಗಲು ಹಾಗೂ ಸುಲಭವಾಗಿ ಮಾಹಿತಿ ಮತ್ತು ಸೇವಾ ಸೌಲಭ್ಯಗಳನ್ನು ನೀಡಲು ಪೊಲೀಸ್ ಇಲಾಖೆಯು ರಾಜ್ಯದ ಎಲ್ಲಾ ಜಿಲ್ಲೆಗಳ ವೆಬ್‌ಸೈಟ್‌ಗಳನ್ನು ಏಕ ರೂಪ ವ್ಯವಸ್ಥೆಯಡಿಯಲ್ಲಿ ಜಾರಿಗೆ ತಂದಿದೆ.

ಸಾರ್ವಜನಿಕರು ಯಾವುದೇ ಜಿಲ್ಲೆಯ ಪೊಲೀಸ್ ವೆಬ್‌ಸೈಟನ್ನು ವೀಕ್ಷಿಸಲು ಸುಲಭ ಮಾರ್ಗವನ್ನು ಇಲಾಖೆ ಮಾಡಿದೆ. ಉದಾ: ಸಾರ್ವಜನಿಕರು ದಾವಣಗೆರೆ ಜಿಲ್ಲಾ ಪೊಲೀಸ್ ವೆಬ್‌ಸೈಟನ್ನು ವೀಕ್ಷಿಸಲು:- Davangerepolice.karnataka.gov.in ಎಂದು ನಮೂದಿಸಿದರೆ ದಾವಣಗೆರೆ ಜಿಲ್ಲೆಯ ವೆಬ್‌ಸೈಟ್ ತೆರೆದುಕೊಳ್ಳುತ್ತದೆ.

ಜಿಲ್ಲಾ ಪೊಲೀಸ್ ವೆಬ್ ಸೈಟ್‌ನಲ್ಲಿ ಜಿಲ್ಲೆಗೆ ಸಂಬಂಧಿಸಿದ ಪೊಲೀಸ್ ಇಲಾಖೆಯ ಎಲ್ಲಾ ಮಾಹಿತಿಗಳು, ಆದೇಶಗಳು, ಪತ್ರಿಕಾ (2ನೇ ಪುಟಕ್ಕೆ)

# 14 ಹೈಕೋರ್ಟ್‌ಗಳಲ್ಲಿ ನೇರ ವಿಚಾರಣೆ ಆರಂಭ

ನವದೆಹಲಿ, ಫೆ. 4 – ದೇಶದ 25 ಹೈಕೋರ್ಟ್‌ಗಳ ಪೈಕಿ 14 ಹೈಕೋರ್ಟ್‌ಗಳು ನೇರ ವಿಚಾರಣೆಯನ್ನು ಆರಂಭಿಸಿವೆ ಎಂದು ರಾಜ್ಯಸಭೆಗೆ ತಿಳಿಸಲಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಹೈಕೋರ್ಟ್ ಗಳು ಆನ್‌ಲೈನ್ ಮೂಲಕ ಕಾರ್ಯ ನಿರ್ವಹಣೆ ಮಾಡುತ್ತಿದ್ದವು. ಒಂಭತ್ತು ಹೈಕೋರ್ಟ್‌ಗಳು ಇನ್ನೂ ನೇರ (2ನೇ ಪುಟಕ್ಕೆ)

# ತ್ಯಾಜ್ಯದಿಂದ ಇಂಧನ : ರೈತರಿಗೆ ಲಕ್ಷ ಕೋಟಿ ರೂ. ಆದಾಯ

ನವದೆಹಲಿ, ಫೆ. 4 – ತ್ಯಾಜ್ಯವನ್ನು ಇಂಧನವಾಗಿ ಪರಿವರ್ತಿಸುವುದರಿಂದ ದೊರೆಯುವ ಲಕ್ಷ ಕೋಟಿ ರೂ. ಹೆಚ್ಚುವರಿ ಆದಾಯವನ್ನು ಸರ್ಕಾರ ರೈತರಿಗೆ ಒದಗಿಸಲಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಧರ್ಮೇದ್ರ ಪ್ರಧಾನ್ ರಾಜ್ಯಸಭೆಗೆ ತಿಳಿಸಿದ್ದಾರೆ.

ನಾವು ಗೋಬರ್ ಧನ್ ಯೋಜನೆ ಆರಂಭಿಸಿದ್ದೇವೆ. ಸೆಗಣಿ, ಕೃಷಿ ತ್ಯಾಜ್ಯ, ನಗರ ತ್ಯಾಜ್ಯ, ಅರಣ್ಯ ತ್ಯಾಜ್ಯ ಸೇರಿದಂತೆ ಎಲ್ಲವನ್ನೂ ಇಂಧನವಾಗಿ ಪರಿವರ್ತಿಸಲಾಗುವುದು. ಇದರಿಂದ 1 ಲಕ್ಷ ಕೋಟಿ ರೂ.ಗಳ ಹೆಚ್ಚುವರಿ ಆದಾಯ ಬರಲಿದೆ. ಅದನ್ನು ರೈತರ ಖಾತೆಗೆ ಜಮಾ ಮಾಡಲಾಗುವುದು. ಇದರಿಂದ ರೈತರ ಆದಾಯ ದ್ವಿಗುಣವಾಗಲಿದೆ ಎಂದು ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದ ಸಲ್ಲಿಸುವ ಚರ್ಚೆಯಲ್ಲಿ ಪಾಲ್ಗೊಂಡು (2ನೇ ಪುಟಕ್ಕೆ)

# ಅಂಗನವಾಡಿಗೆ ಕಳಪೆ ಆಹಾರ ಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಳ



ದಾವಣಗೆರೆ, ಫೆ.4- ಕೊರೊನಾ ವಾರಿಯರ್ಸ್‌ಗಳಾಗಿ ಕೆಲಸ ನಿರ್ವಹಿಸಿ ಮೃತಪಟ್ಟ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಸರ್ಕಾರ 30 ಲಕ್ಷ ರೂ. ನೀಡುವಂತೆ ಹೇಳಿದೆಯಾದರೂ, ಇದುವರೆಗೂ ಯಾರಿಗೂ ಹಣ ದೊರೆತಿಲ್ಲ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಅಧ್ಯಕ್ಷ ಹೆಚ್.ಕೆ. ರಾಮಚಂದ್ರಪ್ಪ ಹೇಳಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 36 ಹಾಗೂ ಜಿಲ್ಲೆಯಲ್ಲಿ 6 ಅಂಗನವಾಡಿ ಕಾರ್ಯಕರ್ತೆಯರು ಕೋವಿಡ್‌ನಿಂದಾಗಿ ಮೃತಪಟ್ಟಿದ್ದಾರೆ. ಅವರಿಗೂ ಈ ಕೂಡಲೇ ಸರ್ಕಾರ ಹಣ ಬಿಡುಗಡೆ ಮಾಡಬೇಕು (2ನೇ ಪುಟಕ್ಕೆ)

# ಪ್ರತಿಭಟನೆಗೆ ಗ್ರೆಟಾ ತುನ್‌ಬರ್ಗ್ 'ಮಾರ್ಗಸೂಚಿ'

## ದೆಹಲಿ ಪೊಲೀಸರಿಂದ ಎಫ್.ಐ.ಆರ್., ಖಲಿಸ್ತಾನಿ ಸಂಪರ್ಕದ ಸುಳಿವು

ನವದೆಹಲಿ, ಫೆ. 4 – ಅಂತರರಾಷ್ಟ್ರೀಯ ಯುವ ಪರಿಸರ ಕಾರ್ಯಕರ್ತೆ ಗ್ರೆಟಾ ತುನ್‌ಬರ್ಗ್ ಹಂಚಿಕೊಂಡ ರೈತರ ಪ್ರತಿಭಟನೆಯ 'ಮಾರ್ಗಸೂಚಿ' ಬಗ್ಗೆ ದೆಹಲಿ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದು, ಈ ದಾಖಲೆ ರೂಪಿಸುವುದರ ಹಿಂದೆ ಖಲಿಸ್ತಾನಿ ಪರ ಗುಂಪೊಂದು ಇರುವುದು ಆರಂಭಿಕ ತನಿಖೆಯಲ್ಲಿ ಕಂಡು ಬಂದಿರುವುದಾಗಿ ತಿಳಿಸಿದ್ದಾರೆ.

ದೆಹಲಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸುವುದಾಗಿ ಹೇಳಿದ್ದ ಗ್ರೆಟಾ ತುನ್‌ಬರ್ಗ್, ಪ್ರತಿಭಟನೆಗೆ ಬೆಂಬಲಿಸುವುದರ ಕುರಿತು ಮಾರ್ಗಸೂಚಿ ದಾಖಲೆಗಳನ್ನು ಪ್ರಕಟಿಸಿದ್ದರು. ಇದರಲ್ಲಿ ಭಾರತ ಫ್ಯಾಸಿಸ್ಟ್ ದೇಶವಾಗುವತ್ತ ಸಾಗುತ್ತಿದೆ, ಗಣರಾಜ್ಯೋತ್ಸವ ಸೈನ್ಯದ ಬಲ ಪ್ರದರ್ಶನ ಎಂದು ಹೇಳುವುದರಿಂದ ಹಿಡಿದು ಉದ್ಯಮಿಗಳಾದ ಮುಕೇಶ್ ಅಂಬಾನಿ ಹಾಗೂ ಅದಾನಿ ಅವರ ಉದ್ಯಮಗಳಿಗೆ ಹಾನಿ ಮಾಡುವ ಕುರಿತು ಹಲವಾರು ವಿಷಯಗಳನ್ನು ಪ್ರಸ್ತಾಪಿಸಲಾಗಿತ್ತು.

ಅಂತರರಾಷ್ಟ್ರೀಯ ನಾಯಕರ ಗಮನ ಸೆಳೆಯುವುದು, ಡಿಜಿಟಲ್ ಮಾಧ್ಯಮಗಳ ಮೂಲಕ ಹೋರಾಟದ ದಾಳಿ ನಡೆಸುವುದು, ಭಾರತದ ರಾಯಭಾರಿ ಕಚೇರಿಗಳ ಎದುರು ಪ್ರತಿಭಟನೆ ನಡೆಸುವುದೂ ಸೇರಿದಂತೆ ಹಲವಾರು ಅಂಶಗಳಿದ್ದವು.

ಸಾಮಾಜಿಕ ಜಾಲತಾಣದಲ್ಲಿ ಮಾರ್ಗಸೂಚಿ ದಾಖಲೆಗಳನ್ನು ಹಂಚಿಕೊಂಡ ಬಗ್ಗೆ ಎಫ್.ಐ.ಆರ್. ದಾಖಲಿಸಲಾಗಿದೆ. ಆದರೆ, ಇದರಲ್ಲಿ ಯಾರ ಹೆಸರನ್ನೂ ಸೇರ್ಪಡೆ ಮಾಡಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ವಿಶೇಷ ಸಿ.ಪಿ. (ಅಪರಾಧ) ಪ್ರವೀರ್ ರಂಜನ್, ದೇಶದಲ್ಲಿ ಸಾಮಾಜಿಕ ಸಾಮರಸ್ಯ ಕದಡುವ ಕ್ರಿಯಾ ಯೋಜನೆ ಹೊಂದಿರುವ ದಾಖಲೆಯೊಂದು ದೆಹಲಿ ಪೊಲೀಸರ ಗಮನಕ್ಕೆ ಬಂದಿದೆ. ಇದನ್ನು ರೂಪಿಸಿದವರ ವಿರುದ್ಧ ಅಪರಾಧಿಕ ಸಂಚು, ದೇಶದ್ರೋಹ ಮತ್ತಿತರೆ ಪ್ರಕರಣಗಳನ್ನು ದಾಖಲಿಸಲಾಗಿದೆ (2ನೇ ಪುಟಕ್ಕೆ)


## ಸಾರ್ವಜನಿಕ ತಿಳಿವಳಿಕೆ ನೋಟೀಸು

ನಾವು 1) ಶ್ರೀಮತಿ ರೇಖಾ ಕೋಂ ರಾಜಶೇಖರ ಯರೇಶೀಮಿ ಮತ್ತು 2) ಶ್ರೀಮತಿ ಶಿವಮ್ಮ ಕೋಂ ಚನ್ನಬಸಪ್ಪ ಯರೇಶೀಮಿ ಸಾ।। ಹಾವೇರಿ, ವಿದ್ಯಾನಗರ ಪೂರ್ವ ಬಡಾವಣೆ, ಹಾವೇರಿ ಈ ಮೂಲಕ ಯಾವತ್ತೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಹಾವೇರಿ ಜಿಲ್ಲಾ ಹಾವೇರಿ ತಾಲ್ಲೂಕು ಪೈಕಿ ದೇವಗಿರಿ ಯಲ್ಲಾಪೂರ ಗ್ರಾಮದ ರಿ.ಸ.ನಂ.74/6 ಕ್ಷೇತ್ರ 01 ಎಕರೆ ಇದರ ತರಂ 03.07 ರೂ ಜಮೀನು ನಮ್ಮಿಬ್ಬರ ಸಾಮೂಹಿಕ ಮಾಲ್ಕೀ ಕಬ್ಜಾ ವಹಿವಾಯುಳ್ಳ ಜಮೀನು ಇರುತ್ತದೆ. ಈ ಮೇಲ್ಕಾಣಿಸಿದ ಜಮೀನಿನ ಬಗ್ಗೆ ದಾವಣಗೆರೆ ಶಹರದ ನಿವಾಸಿ ಶ್ರೀ ಹರೀಶ್ ಜೆ.ಸಿ. ತಂದೆ ಬಿ.ಚಂದ್ರಪ್ಪ, ಸಾ।। ದಾವಣಗೆರೆ, ಎಸ್.ಎಸ್ ಬಡಾವಣೆ, ಬಿ.ಎಸ್.ಎನ್.ಎಲ್ ಆಫೀಸ್ ಹತ್ತಿರ ದಾವಣಗೆರೆ ಇವರು ನಮ್ಮ ಕೂಡ ನಮ್ಮ ಕಬ್ಜ ರಹಿತ ಖರೀದಿ ಒಪ್ಪಂದ ಕರಾರು ಪತ್ರ ಮಾಡಿಕೊಂಡಿದ್ದರು. ಆದರೆ ಸದರಿ ಶ್ರೀ ಹರೀಶ ಇವರು ಸದರಿ ಒಪ್ಪಂದ ಕರಾರು ಪತ್ರದ ಶರ್ತಿನ ಪ್ರಕಾರ ನಡೆದುಕೊಳ್ಳದೇ ಸದರಿ ಖರೀದಿ ಒಪ್ಪಂದ ಕರಾರ ಪತ್ರದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದರಿಂದ, ನಾವು ನಮ್ಮ ವಕೀಲರಿಂದ ದಿನಾಂಕ 09.01.2021 ರಂದು ಸದರಿ ಶ್ರೀ ಹರೀಶರವರಿಗೆ ನೋಂದಾಯಿತ ಅಂಚೆ ಪರತ್ ಪಾವತಿಯೊಂದಿಗೆ ಮತ್ತು ಸಾದಾ ಅಂಚೆ ಮೂಲಕ ನೋಟಿಸ್ ನೀಡಿ, ಸದರ ಖರೀದಿ ಒಪ್ಪಂದ ಕರಾರು ಪತ್ರವನ್ನು ರದ್ದುಪಡಿಸಿದ್ದು ಅದೆ ಮತ್ತು ಸದರಿ ಶ್ರೀ ಹರೀಶರವರು ನಮಗೆ ಕೊಟ್ಟಿದ್ದ ಸಂಚಗಾರ ಹಣವನ್ನು ನಾವು ಮುಟ್ಟುಗೋಲು (Forfetie) ಮಾಡಿಕೊಂಡಿದ್ದನ್ನು ಸಹ ಸದ್ರಿಯವರಿಗೆ ತಿಳಿಸಿದ್ದು ಅದೆ. ಸದರಿ ನೋಟಿಸನ್ನು ದಿನಾಂಕ 11.01.2021 ರಂದು ಶ್ರೀ ಹರೀಶ ಇವರು ಸ್ವೀಕರಿಸಿದ್ದು ಮತ್ತು ಸದರಿ ನೋಟಿಸಿನ ಯಾವತ್ತು ಸಂಗತಿಗಳನ್ನು ಶ್ರೀ ಹರೀಶ ಇವರು ಸಂಪೂರ್ಣವಾಗಿ ಒಪ್ಪಿಕೊಂಡಿರುತ್ತಾರೆ.

ಕಾರಣ ನಮ್ಮ ಮೇಲ್ಕಾಣಿಸಿದ ಜಮೀನನ್ನು ಖರೀದಿ ಹಿಡಿಯಬೇಕೆಂಬುವ ಆಸಕ್ತಿಯುಳ್ಳವರು ಮೇಲ್ಕಾಣಿಸಿದ ನಮ್ಮ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ ತಿಳಿಯಿರಿ ಅಂತಾ ಕೊಟ್ಟ ಸಾರ್ಜನಿಕ ತಿಳುವಳಿಕೆ ನೋಟಿಸ್.

ಸಹಿ/-
ಆರ್.ಆರ್. ಯರೇಶೀಮಿ, ಶಿವಮ್ಮ
84948 82039

ಹಾವೇರಿ
ದಿನಾಂಕ : 01.02.2021

# ಹರಪನಹಳ್ಳಿ ತಾಲ್ಲೂಕಿನ ಮೂರು ಗ್ರಾ.ಪಂ.ಗಳ ಅಧ್ಯಕ್ಷ - ಉಪಾಧ್ಯಕ್ಷ ಸ್ಥಾನಗಳು ಕಾಂಗ್ರೆಸ್ ತೆಕ್ಕೆಗೆ



ಹರಪನಹಳ್ಳಿ, ಫೆ.4 - ತಾಲ್ಲೂಕಿನಲ್ಲಿ ಗುರುವಾರ ನಡೆದ ಕೆ.ಕಲ್ಲಹಳ್ಳಿ, ಅಡವಿಹಳ್ಳಿ, ತೌಡೂರು ಗ್ರಾಮ ಪಂಚಾಯಿತಿಗಳ ಚುನಾವಣೆಯಲ್ಲಿ ಮೂರು ಗ್ರಾಮ ಪಂಚಾಯ್ತಿಗಳ ಆಡಳಿತ ಕೈ ವಶವಾಗಿದೆ.

**ಕೆ.ಕಲ್ಲಹಳ್ಳಿ ಗ್ರಾ.ಪಂ :** ಕೆ.ಕಲ್ಲಹಳ್ಳಿ ಗ್ರಾಮ ಪಂಚಾಯ್ತಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಮಾಳ್ಗಿ ತಿಮ್ಮಪ್ಪ, ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಎಂ.ನೇತ್ರಾವತಿ ಅವರು ಅವಿರೋಧವಾಗಿ ಆಯ್ಕೆಯಾಗಿ ದ್ದಾರೆ. ಎಇಇ ಸಿದ್ದರಾಜು ಚುನಾವಣಾಧಿಕಾರಿ ಯಾಗಿದ್ದರು. ಪಿಎಸ್ಐ ಪ್ರಶಾಂತ ಬಂದೋಬಸ್ತ್ ಏರ್ಪಡಿಸಿದ್ದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಜಿ.ಪಂ ಮಾಜಿ ಅಧ್ಯಕ್ಷ ಎಸ್. ಚಿದಾನಂದಪ್ಪ, ಪ್ರಕಾಶ್ ಪಾಟೀಲ್, ಬಿ.ಶರಣಪ್ಪ, ಬಾಣದ ಅಂಜಿನಪ್ಪ, ಬಿ.ವಾಗೀಶ್, ಇಟ್ಟಿಗುಡಿ ಅಂಜಿನಪ್ಪ, ಬಸವರಾಜ ಮಜ್ಜಿಗೇರಿ, ಜೆಡಿಎಸ್ ಮುಖಂಡ ವಿರುಪಾಕ್ಷಪ್ಪ, ಆರ್.ಗೋಣೆಪ್ಪ, ಕೆ. ಹಾಲೇಶಪ್ಪ, ಎಂ.ಹನುಮಂತಪ್ಪ, ಜಿ.ವೀರಣ್ಣ, ಬಿ. ಮಾನಪ್ಪ, ಪ್ರಕಾಶ ನಾಯ್ಕ, ಕೆ.ಮಂಜುನಾಥ್, ನಾಗರಾಜ್ ನಾಯ್ಕ, ಮಹಾಂತೇಶ, ಮಂಜುನಾಥ, ಚಂದ್ರನಾಯ್ಕ, ರೂಪನಾಯ್ಕ, ಜೆಡಿಎಸ್‌ನ ಪುಟ್ಟನಗೌಡ, ಪಿ.ಪರಶುರಾಮ್, ಪಿಡಿಓ ಭೋಜಪ್ಪ, ಪ್ರಸನ್ನ, ಮಂಜುನಾಥ್ ಹಾಗೂ ಸಿಬ್ಬಂದಿ ಇದ್ದರು.

**ಅಡವಿಹಳ್ಳಿ ಗ್ರಾ.ಪಂ :** ಅಡವಿಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಚಲವಾದಿ ಪಕ್ಕೀರಪ್ಪ ಹಾಗೂ ಉಪಾಧ್ಯಕ್ಷರಾಗಿ ವಜೀರಾಬಿ ತಲಾ 10 ಮತಗಳನ್ನು ಪಡೆದು ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಇರುವ 19 ಜನ ಸದಸ್ಯರಲ್ಲಿ ಎರಡು ದಿನಗಳ ಹಿಂದೆ ಒಬ್ಬ ಸದಸ್ಯೆ ನಿಧನರಾಗಿದ್ದು, ಉಳಿದ 18 ಜನ ಸದಸ್ಯರು ಹಾಜರಿದ್ದರು. ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಜಯರಾಜ ಚುನಾವಣಾಧಿಕಾರಿ ಯಾಗಿದ್ದರು. ಪಿಡಿಓ ರಮೇಶ್ ಇದ್ದರು.

**ತೌಡೂರು ಗ್ರಾ.ಪಂ :** ತೌಡೂರು ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಎಂ.ಶೆಟ್ಟಿನಾಯ್ಕ ಹಾಗೂ ಉಪಾಧ್ಯಕ್ಷರಾಗಿ ಶಾಂತವ್ವ ಆಯ್ಕೆಯಾಗಿದ್ದಾರೆ. ಒಟ್ಟು 25 ಜನ ಸದಸ್ಯರು ಹಾಜರಿದ್ದರು. ಸಿಡಿಪಿಓ ಮಂಜುನಾಥ್ ಚುನಾವಣಾಧಿಕಾರಿಯಾಗಿದ್ದರು.

## ನಿಖಿಲ್ ಕೊಂಡಜ್ಜಿ ಆಯ್ಕೆ

**(1ನೇ ಪುಟದಿಂದ)** ಅಧ್ಯಕ್ಷರಾದರೆ, 2ನೇ ಹೆಚ್ಚು ಮತ ಪಡೆದವರು ಉಪಾಧ್ಯಕ್ಷರಾಗುತ್ತಾರೆ. 3ನೇ ಸ್ಥಾನ ಪಡೆದವರು ಪ್ರಧಾನ ಕಾರ್ಯದರ್ಶಿಯಾಗುತ್ತಾರೆ. ಜಿಲ್ಲಾ ಘಟಕದಲ್ಲಿ 7 ಪ್ರಧಾನ ಕಾರ್ಯದರ್ಶಿ ಸ್ಥಾನಗಳಿವೆ.

## ಗ್ರೆಟಾ ತುನ್‌ಬರ್ಗ್ 'ಮಾರ್ಗಸೂಚಿ'

**(1ನೇ ಪುಟದಿಂದ)** ಎಂದು ಹೇಳಿದ್ದಾರೆ.

ಖಲಿಸ್ತಾನ ಪರ ಸಂಘಟನೆಯೊಂದು ಈ ದಾಖಲೆ ರೂಪಿಸಿರುವುದು ಆರಂಭಿಕ ತನಿಖೆಯಿಂದ ಕಂಡು ಬಂದಿದೆ ಎಂದವರು ಹೇಳಿದ್ದಾರೆ.

ಜನವರಿ 23ರಂದು ಟ್ವೀಟ್‌ಗಳ ಸುರಿಮಳೆ ಗರೆಯುವ ಹಾಗೂ ಜನವರಿ 26ರಂದು ಇಲ್ಲವೇ ಅದಕ್ಕೂ ಮುಂಚೆ ಡಿಜಿಟಲ್ ದಾಳಿ ನಡೆಸುವ ಮಾಹಿತಿ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಲಾದ ದಾಖಲೆಗಳಲ್ಲಿದೆ ಎಂದು ರಂಜನ್ ತಿಳಿಸಿದ್ದಾರೆ.

ಮೊದಲು ಮಾರ್ಗಸೂಚಿ ದಾಖಲೆ ಪ್ರಕಟಿಸಿದ್ದ ಗ್ರೆಟಾ ತುನ್‌ಬರ್ಗ್ ನಂತರ ಅದನ್ನು ಅಳಿಸಿದ್ದರು. ದಾಖಲೆ ಹಳೆಯದಾಗಿದೆ ಎಂದು ಹೇಳಿದ್ದ ಅವರು, ಹೊಸ ಮಾರ್ಗಸೂಚಿ ನೀಡುವುದಾಗಿ ತಿಳಿಸಿದ್ದರು.

## ಭಗವಾನ್ ಮುಖಕ್ಕೆ ಮಸಿ

**(1ನೇ ಪುಟದಿಂದ)** ಅವರಿಗೆ ಮಸಿ ಬಳಿದು ತಕ್ಕ ಶಾಸ್ತಿ ಮಾಡಿದ್ದೇನೆ. ಜೈ ಶ್ರೀರಾಮ್ ಎಂದು ಬರೆದುಕೊಂಡಿದ್ದಾರೆ.

ಈ ಬಗ್ಗೆ ಭಗವಾನ್ ಅವರು ಹಲಸೂರು ಗೇಟ್ ಸ್ಟೇಷನ್ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ವಕೀಲರ ಸಂಘದಲ್ಲೂ ಸಹ ದೂರು ದಾಖಲಿಸಲಾಗುವುದು ಎಂದು ಭಗವಾನ್ ಪರ ವಕೀಲರು ಹೇಳಿದ್ದಾರೆ.

# ಮಕ್ಕಳಲ್ಲಿ ಅಪೌಷ್ಠಿಕತೆ ಹೆಚ್ಚಳ

**(1ನೇ ಪುಟದಿಂದ)** ಎಂದರು.

ಮಕ್ಕಳೇ ದೇವರು ಎಂದು ಹೇಳಲಾಗುತ್ತದೆ. ಆದರೆ ಅಂತಹ ಮಕ್ಕಳಿಗೆ ಅಂಗನವಾಡಿಯಲ್ಲಿ ಕಳಪೆ ಆಹಾರ ಪೂರೈಕೆ ಮಾಡಲಾಗುತ್ತದೆ. ಮಕ್ಕಳು, ಗರ್ಭಿಣಿ, ಬಾಣಂತಿಯರು ಕಳಪೆ ಆಹಾರ ಬಳಸುತ್ತಿರುವುದರಿಂದ ಅಪೌಷ್ಠಿಕತೆ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ 40,33,581 ಮಕ್ಕಳು ಅಂಗನವಾಡಿ ಕೇಂದ್ರಗಳಿಗೆ ಬರುತ್ತಿದ್ದಾರೆ. ಸರ್ವೇ ಪ್ರಕಾರ 62,199 ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ ಎಂದು ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು ಈ ಬಗ್ಗೆ ಗಮನ ಹರಿಸಬೇಕು ಎಂದು ಆಗ್ರಹಿಸಿದರು.

ಅಂಗವಾಡಿ ಕಾರ್ಯಕರ್ತೆಯರಿಗೆ ಬೆಳಿಗ್ಗೆ 9.30 ರಿಂದ ಸಂಜೆ 4ರವರೆಗೆ ಮಾತ್ರ ಕೆಲಸದ ಅವಧಿ ಎಂದು ನಿಗದಿಗೊಳಿಸಿ ಸರ್ಕಾರ ಆದೇಶಿಸಿದೆ. ಆದರೆ ನಿಗದಿತ ವೇಳೆಯ ನಂತರವೂ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ. ಇದು ಸಲ್ಲದು ಎಂದ ಅವರು, ಸರ್ವೀಸ್ ಆಧಾರದ ಮೇಲೆ ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ನೀಡಬೇಕು ಎಂದರು.

ನಿವೃತ್ತಿಯಾದ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕನಿಷ್ಠ 5 ಸಾವಿರ ರೂ. ಪಿಂಚಣಿ ನೀಡಬೇಕು.ಕೇಂದ್ರ ಸರ್ಕಾರದ ಘೋಷಣೆಯಂತೆ ಕನಿಷ್ಠ 18 ಸಾವಿರ ರೂ. ವೇತನ ಜಾರಿಗೆ ತರಬೇಕು.

ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಯಾವ ಉದ್ದೇಶಕ್ಕಾಗಿ ನೇಮಿಸಲಾಗಿದೆಯೋ ಅದು ಬಿಟ್ಟು ಬೇರೆ ಉದ್ದೇಶಕ್ಕೆ ಬಳಸಿಕೊಳ್ಳಬಾರದೆಂದು ಹೈಕೋರ್ಟ್ ಒಪ್ಪಿಕೊಂಡಿರುವುದನ್ನು ಸರ್ಕಾರ ಶೀಘ್ರವೇ ಜಾರಿಗೆ ತರಬೇಕು ಎಂದು ರಾಮಚಂದ್ರಪ್ಪ ಹೇಳಿದರು.

ಈ ಎಲ್ಲಾ ಬೇಡಿಕೆಗಳನ್ನಿಟ್ಟು ಹೋರಾಟ ನಡೆಸುವ ಸಂಬಂಧ ಇದೇ ಫೆ.7 ರಂದು ಬೆಂಗಳೂರಿನ ಎಐಟಿಯುಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ, ಮಾರ್ಚ್ ವೇಳೆಗೆ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಆವರಗೆರೆ ವಾಸು, ಆವರಗೆರೆ ಚಂದ್ರು, ಎನ್.ಹೆಚ್. ರಾಮಪ್ಪ, ಸುರೇಶ್, ವಿಶಾಲಾಕ್ಷಿ, ಎಸ್. ಎಸ್. ಮಲ್ಲಮ್ಮ, ಜಿ.ರೇಣುಕಮ್ಮ, ಸುಶೀಲಮ್ಮ ಸಿ.ಬಿ. ಕಾಳಮ್ಮ, ಭರಮಕ್ಕ, ಸರೋಜಮ್ಮ ಇತರರು ಉಪಸ್ಥಿತರಿದ್ದರು.

# ಕುರುಬ ಸಮಾಜಕ್ಕೆ ಎಸ್ಟಿ ಮೀಸಲಾತಿ: ನಾಡಿದ್ದು ಬೃಹತ್ ಸಮಾವೇಶ

**ಹರಪನಹಳ್ಳಿ**

ಹರಪನಹಳ್ಳಿ, ಫೆ.4 - ಕುರುಬ ಸಮಾಜಕ್ಕೆ ಪರಿಶಿಷ್ಟ ಪಂಗಡದ ಮೀಸಲಾತಿ ಬೇಕೆಂದು ಹೋರಾಟ ಮಾಡುತ್ತಿರುವ ಶ್ರೀ ನಿರಂಜನಾನಂದ ಸ್ವಾಮೀಜಿ ಕರೆಯ ಮೇರೆಗೆ ಇದೇ ದಿನಾಂಕ 7 ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಬೃಹತ್ ಸಮಾವೇಶಕ್ಕೆ ತಾಲ್ಲೂಕಿನ ಕುರುಬ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮುಖಂಡ ಕಲ್ಲೇರ ಬಸವರಾಜ್ ಮನವಿ ಮಾಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರೀಗಳು ಕಾಗಿನೆಲೆಯಿಂದ ಬೆಂಗಳೂರಿಗೆ ಪಾದಯಾತ್ರೆ ಮೂಲಕ ಈಗಾಗಲೇ ತಲುಪಿದ್ದು ಕುರುಬ ಸಮಾಜದ ಎಲ್ಲಾ ಶಾಖಾಮಠದ ಶ್ರೀಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯ್ತಿ ಸದಸ್ಯ ಹೆಚ್.ಬಿ.ಪರಶುರಾಮಪ್ಪ ಮಾತನಾಡಿ, ತಾಲ್ಲೂಕಿನಿಂದ 10ರಿಂದ 15 ಸಾವಿರ ಸಮಾಜದ ಬಂಧುಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ತಾಲ್ಲೂಕಿನ 30 ಗ್ರಾಮ ಪಂಚಾಯ್ತಿ ಕೇಂದ್ರಗಳಿಂದ ಸಮಾಜದ ಬಂಧುಗಳು ತೆರಳಲು ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೇ ಟ್ರ್ಯಾಕ್ಸ್, ಕಾರ್ ಹಾಗೂ ಟ್ರ್ಯಾಕ್ಟರ್‌ಗಳ ಮೂಲಕವೂ ತೆರಳಲಿದ್ದಾರೆ. ಬೆಂಗಳೂರಿನ ಸಮಾವೇಶದಲ್ಲಿ 10 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜದವರು ಸೇರಲಿದ್ದಾರೆ ಎಂದು ಹೇಳಿದರು.

ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ವೈ.ಕೆ.ಬಿ. ದುರುಗಪ್ಪ ಮಾತನಾಡಿ, ನಾಳೆ ದಿನಾಂಕ 6ರ ರಾತ್ರಿ 9 ಗಂಟೆಯಿಂದ ಪಟ್ಟಣದ ಸಂಡೂರುಕೇರಿ, ಕಂಚಿಕೇರಿ ಹಾಗೂ ಕೋಣನಕೇರಿಯಿಂದ ಮೂರು ಬಸ್‌ಗಳು ತೆರಳಲಿವೆ. ಗ್ರಾಮಗಳಿಂದಲೂ ಇದೇ ಸಮಯಕ್ಕೆ ತೆರಳಲಿವೆ ಎಂದು ಅವರು ವಿವರಿಸಿದರು.

ಕುರುಬ ಸಮಾಜದ ಎಸ್‌ಟಿ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಹೆಚ್.ವಸಂತ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸಾಬಳ್ಳಿ ಜಂಬಣ್ಣ, ಪುರಸಭೆ ಸದಸ್ಯರಾದ ಗಣೇಶ್ ಪೈಲ್ವಾನ್, ಭರತೇಶ್ ಮುಖಂಡರಾದ ಅಲಮರಸಿಕೇರಿ ಶೇಖರಪ್ಪ, ಗೋಣಿಬಸಪ್ಪ, ಮಾಲಾ, ಶ್ರೀನಿವಾಸ ಹಾಗೂ ಇತರರು ಹಾಜರಿದ್ದರು.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ಮಾಮಾಸ್ ಜಾಯಿಂಟ್ ರಸ್ತೆ, ಎಮ್.ಸಿ.ಸಿ. 'ಬಿ' ಬ್ಲಾಕ್, ಡೆಂಟಲ್ ಕಾಲೇಜ್ ರಸ್ತೆ, ಆಂಜನೇಯ ಬಡಾವಣೆ 1ನೇ ಕ್ರಾಸ್ ನಿಂದ 4ನೇ ಕ್ರಾಸ್‌ವರೆಗೆ, ಯು.ಬಿ.ಡಿ.ಟಿ. ಕಾಲೇಜ್, ಡಿ.ಆರ್.ಆರ್. ಪಾಲಿಟೆಕ್ನಿಕ್, ಅನುಭವ ಮಂಟಪ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ವಾಮಿ ವಿವೇಕಾನಂದ ಬಡಾವಣೆ, ಆಂಜನೇಯ ಬಡಾವಣೆ 17, 18 ಮತ್ತು 19 ನೇ ಕ್ರಾಸ್ ಹಾಗೂ ಸುತ್ತ ಮುತ್ತ ಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಶ್ರೀರಾಮ ಸಂಕೀರ್ತನಾ ಯಾತ್ರಾ ಮೆರವಣಿಗೆ




ಹರಿಹರ, ಫೆ.4- ನಗರದಲ್ಲಿ ಶ್ರೀರಾಮ ಸಂಕೀರ್ತನಾ ಯಾತ್ರಾ ಮೆರವಣಿಗೆಯು ಇಂದು ವಿಜೃಂಭಣೆಯಿಂದ ಜರುಗಿತು.

ನಗರದ ಪ್ರಸಿದ್ಧ ಐತಿಹಾಸಿಕ ಶ್ರೀ ಹರಿಹರೇಶ್ವರ ದೇವಸ್ಥಾನ ಮುಂಭಾಗದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಶಾರದೇಶಾನಂದ ಮಹಾಸ್ವಾಮೀಜಿ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್ ಅವರುಗಳು ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ಯುವಕರು ಶ್ರೀರಾಮ ಜೈಕಾರ ಹಾಕಿದರೆ, ವಿವಿಧ ಮಹಿಳಾ ಭಜನೆ ತಂಡದವರು ಕೋಲಾಟದ ಮೂಲಕ ಕುಣಿದು ಮೆರವಣಿಗೆಗೆ ಕಳೆ ತಂದರು.

ಮೆರವಣಿಗೆಯು ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ರಾಜಬೀದಿಗಳಲ್ಲಿ ಸಂಚರಿಸಿ ರಾಜಾರಾಮ್ ಕಾಲೋನಿಯಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಮುಕ್ತಾಯವಾಯಿತು.

ಈ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪ್ರಧಾನ ಅರ್ಚಕ ವರಹಾಚಾರ್, ನಗರಸಭೆ ಸದಸ್ಯೆ ಅಶ್ವಿನಿ, ಹನುಮಂತಪ್ಪ, ಶಂಕರ್ ಖಟಾವ್ಕರ್, ರಜನಿಕಾಂತ್, ನೀತಾ ಮೆಹರ್ವಾಡೆ, ಮಾಜಿ ನಗರಸಭೆ ಉಪಾಧ್ಯಕ್ಷೆ ಅಂಬುಜಾ ಪಿ. ರಾಜೊಳ್ಳಿ, ಮುಖಂಡರಾದ ಹೆಚ್.ಎಂ. ಶಿವಾನಂದಪ್ಪ ಹಲಸಬಾಳು, ಬಾತಿ ಚಂದ್ರಶೇಖರ್, ಕೃಷ್ಣಮೂರ್ತಿ ಶೆಟ್ಟಿ, ಶಿವಪ್ರಕಾಶ್ ಶಾಸ್ತ್ರಿ, ತುಳಜಪ್ಪ ಭೂತೆ, ಮಾರುತಿ ಶೆಟ್ಟಿ, ಅಜಿತ್ ಸಾವಂತ್, ಚಂದನ್ ಮೂರ್ಕಲ್, ಪ್ರಕಾಶ್, ಚೇತನ್ ತಿಪ್ಪಶೆಟ್ಟರ್, ಡಾ. ಖಮಿತ್ಕರ್, ಪ್ರಮೀಳಾ ನಲ್ಲೂರು, ರೂಪಾ ಕಾಟ್ವೆ, ಶ್ರೀನಿವಾಸ್ ಚಂದಪೂರ್, ಸುನಿಲ್, ಪ್ರಶಾಂತ್ ಮತ್ತು ಇತರರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಸತೀಶ್‌ಕುಮಾರ್, ನಗರ ಠಾಣೆ ಪಿಎಸ್‌ಐಗಳಾದ ಸುನೀಲ್, ಬಸವರಾಜ್ ತೆಲಿ, ಗುತ್ತೂರು ಠಾಣೆಯ ಪಿಎಸ್‌ಐ ಡಿ. ರವಿಕುಮಾರ್, ಮಲೇಬೆನ್ನೂರು ಪಿಎಸ್‌ಐ ವೀರಬಸಪ್ಪ ಅವರುಗಳು ಬಂದೋಬಸ್ತ್ ಉಸ್ತುವಾರಿ ವಹಿಸಿದ್ದರು.

## ಕೊಟ್ಟೂರು : ಚಿರಿಬಿ ಗ್ರಾ.ಪಂ ಅಧ್ಯಕ್ಷರಾಗಿ ದೇವೀರಮ್ಮ ಬೂದಿ ನಾಗರಾಜ್



ಕೊಟ್ಟೂರು, ಫೆ.4- ಕೊಟ್ಟೂರು ತಾಲ್ಲೂಕು ಚಿರಿಬಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಬಿಜೆಪಿಯ ದೇವೀರಮ್ಮ ಬೂದಿ ನಾಗರಾಜ್ ಹಾಗೂ ಉಪಾಧ್ಯಕ್ಷರಾಗಿ ಎಸ್.ಎಂ. ಚಿನ್ಮಯಾನಂದಸ್ವಾಮಿ ಅವಿರೋಧ ವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಪಿ. ಚನ್ನಬಸವನಗೌಡ್ರು, ಮುಖಂಡರಾದ ಭೀಮಣ್ಣ ಕೂಡ್ಲಿಗಿ, ತಾ.ಪಂ. ಅಧ್ಯಕ್ಷರಾದ ಗುರುಮೂರ್ತಿ, ಪಿ. ನಾಗರಾಜ, ಕೆ. ಅವಿನಾಶ್ ಮತ್ತಿತರರಿದ್ದರು.

**ದಿನದ ಚುಟುಕು**

ಮಾನವ ಹರಿಸಿದ ತಂತಿಯ ಕಾರಣ
ಕಲರವ ಇಲ್ಲದೆ ನಾಡಾಗಿದೆ ಭಣಭಣ
ಕಂಪನದಲೆ ಹರಡಿದೆ ತನ್ನಯ ಬಲೆ
ಹಕ್ಕಿಯ ಗಾನದ ಕೊರಳಿಗಿಲ್ಲದ ಬೆಲೆ.

- ವೀಕೆಎಂ.

# ಪೊಲೀಸ್ ಇಲಾಖೆ ಮಾಹಿತಿ ವೆಬ್‌ಸೈಟ್ ಜಾರಿಗೆ

**(1ನೇ ಪುಟದಿಂದ)** ಪ್ರಕಟಣೆಗಳು, ಜಿಲ್ಲಾ ಪೊಲೀಸ್ ವ್ಯವಸ್ಥೆಯ ವಿವಿಧ ಹಂತದ ಕಛೇರಿಗಳು, ಪೊಲೀಸ್ ಠಾಣೆಗಳು, ಅಧಿ ಕಾರಿಗಳು, ಸಿಬ್ಬಂದಿಗಳ ಬಗ್ಗೆ, ಇ-ಬೀಟ್ ವ್ಯವಸ್ಥೆ ಬಗ್ಗೆ, ಪೊಲೀಸ್ ಠಾಣಾ ವ್ಯಾಪ್ತಿಯ ಮ್ಯಾಪ್‌ಗಳು, ಸಕಾಲ, ಸೇವಾ ಸಿಂಧು, ಸುಬಾವು ಇನ್ನೂ ಅನೇಕ ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿ ಲಭ್ಯವಿರುತ್ತದೆ.

**ಸುಬಾಹು ಇ-ಬೀಟ್ ವ್ಯವಸ್ಥೆ-** ಪೊಲೀಸ್ ಇಲಾಖೆಯಲ್ಲಿ ನೂತನವಾಗಿ ಸುಬಾಹು ಇ-ಬೀಟ್ ವ್ಯವಸ್ಥೆಯನ್ನು ಜಾರಿಗೊಳಿಸಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದು, ವ್ಯವಸ್ಥೆ ಕುರಿತಂತೆ ವಿವರ ನೀಡಿದ್ದಾರೆ.

**ಸುಬಾಹು ಇ-ಬೀಟ್ ವ್ಯವಸ್ಥೆ ಬಗ್ಗೆ ಮಾಹಿತಿ:** ಎಲೆಕ್ಟ್ರಾನಿಕ್ ಇ-ಬೀಟ್ ವ್ಯವಸ್ಥೆ ಯಲ್ಲಿ ಪೊಲೀಸ್ ಸಿಬ್ಬಂದಿಯವರಿಗೆಂದ ಅಭಿವೃದ್ಧಿಪಡಿಸಿ, ಅಂಡ್ರಾಯ್ಡ್ ಆಪ್ ಅನ್ನು ಸಿಬ್ಬಂದಿಯ ಮೊಬೈಲ್ ಫೋನ್‌ಗಳಿಗೆ ಅಳವಡಿಸಲಾಗಿರುತ್ತದೆ. ಅಲ್ಲಿಯೇ ಈ ಆಪ್‌ನ ಕ್ಯೂ.ಆರ್ ಕೋಡ್ ಅಭಿವೃದ್ಧಿಪ ಡಿಸಿದ್ದು, ಬೀಟ್‌ನ ನಿಗದಿತ ಪಾಯಿಂಟ್‌ನ ಮನೆಗಳಲ್ಲಿ ಕ್ಯೂಆರ್ ಕೋಡನ್ನು ಅಳವಡಿಸಲಾಗುತ್ತದೆ. ಬೀಟ್ ಪಾಯಿಂಟ್‌ಗಳಿಗೆ ತೆರಳಿದ ಬೀಟ್ ಪೊಲೀಸ್ ಸಿಬ್ಬಂದಿಯವರು ಕ್ಯೂಆರ್ ಅಳಡಿಸಿದ ಜಾಗದಲ್ಲಿ ನಿಂತು ಕ್ಯೂಆರ್. ಕೋಡನ್ನು ಸ್ಕ್ಯಾನ್ ಮಾಡಿದಾಗ ಅಥವಾ ಕ್ಯೂಆರ್ ಕೋಡ್ ಅಳವಡಿಸಿದ ನಿರ್ದಿಷ್ಠ ಪ್ರದೇಶದಲ್ಲಿ ನಿಂತು ಆಪ್‌ನ ಕ್ಯೂಆರ್ ಕೋಡನ್ನು ರೀಡ್ ಮಾಡಬೇಕು. ಒಂದು ವೇಳೆ ಸಿಬ್ಬಂದಿ ಆಪ್ ಆನ್ ಮಾಡದಿದ್ದರೆ ಪೊಲೀಸ್ ಸಿಬ್ಬಂದಿಯವರು ಸದರಿ ಬೀಟ್ ಸ್ಥಳಕ್ಕೆ ಭೇಟಿ ನೀಡಿಲ್ಲವೆಂದು ತಿಳಿದುಬರುತ್ತದೆ.

ಈ ವ್ಯವಸ್ಥೆ ಜಾರಿಯಿಂದ ಜಿಲ್ಲೆಯ ಎಲ್ಲಾ ಸಾರ್ವಜನಿಕರ ಭದ್ರತೆಯ ಕಾರ್ಯ ಹೆಚ್ಚುತ್ತದೆ. ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಬೀಳಲಿದೆ. ಈ ಹಿಂದೆ ಇದ್ದ ರಾತ್ರಿಗಸ್ತಿನ ಸಿಬ್ಬಂದಿ ಹಾಗೂ ಉಸ್ತುವಾರಿ ಅಧಿಕಾರಿಗಳ ಕರ್ತವ್ಯ ಲೋಪ ಪತ್ತೆ ಹಚ್ಚುವುದು ಅಷ್ಟು ಸುಲಭವಾಗಿರಲಿಲ್ಲ. ಒಂದು ವೇಳೆ ಪತ್ತೆಯಾದರೂ ಕೆಲವು ಕಾರಣಗಳನ್ನು ನೀಡಿ ತಪ್ಪಿಸಿಕೊಳ್ಳುತ್ತಿದ್ದರು. ಆದರೆ, ಇ-ಬೀಟ್ ವ್ಯವಸ್ಥೆಯಲ್ಲಿ ಅವಕಾಶವಿಲ್ಲ.

**ಇ-ಬೀಟ್‌ನ ಮುಖ್ಯಾಂಶಗಳು:** ಇ-ಬೀಟ್ ವ್ಯವಸ್ಥೆಯಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಕಂಡಾಗ ಫೋಟೋ ಅಥವಾ ವಿಡಿಯೋ ಮೂಲಕ ಆಪ್‌ನಲ್ಲಿ ತಕ್ಷಣಕ್ಕೆ ಮೇಲಾಧಿಕಾರಿಯವರಿಗೆ ಮಾಹಿತಿಯನ್ನು ಕಳುಹಿಸಬಹುದು.

ನೈಟ್ ಬೀಟ್ ಆಫೀಸರ್ ನೈಟ್‌ಬೀಟ್ ಪೊಲೀಸ್ ಸಿಬ್ಬಂದಿಯವರ ಚಲನ ವಲನ ಗಳನ್ನು ಆಪ್ ಮುಖಾಂತರ ಗಮನಿಸಬ ಹುದು. ಬೀಟ್ ಪೊಲೀಸ್‌ನವರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದಾಗ ಸಿಬ್ಬಂದಿಯ ವರ ಕರ್ತವ್ಯ ನಿರ್ವಹಿಸಿದ ಬಗ್ಗೆ ನೈಟ್‌ಬೀಟ್ ಆಫೀಸರ್‌ಗೆ ಮೆಸೇಜ್ ಹೋಗುತ್ತದೆ.

ಬೀಟ್‌ನಲ್ಲಿ ಬರುವ ಲಾಕಡ್ ಹೌಸ್ (ಬೀಗ ಹಾಕಿದ ಮನೆ) ಗಳನ್ನು ಈ ಆಪ್ ಮುಖಾಂತರ ಗಮನಿಸಬಹುದು.

ಬೀಟ್ ಸಿಬ್ಬಂದಿಯವರು ಬೀಟ್ ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳದಲ್ಲಿ ವಾಸವಿದ್ದ ಸಾರ್ವಜನಿಕರಿಗೆ ಮೊಬೈಲ್ ಮುಖಾಂತರ ಭೇಟಿ ನೀಡಿದ ಬಗ್ಗೆ ಮಾಹಿತಿಯು ಮೆಸೇಜ್ ಮುಖಾಂತರ ಮಾಹಿತಿ ಹೋಗುತ್ತದೆ.

ಬೀಟ್ ಸಿಬ್ಬಂದಿಯವರು ಬೀಟ್ ಪಾಯಿಂಟ್‌ಗಳಿಗೆ ಭೇಟಿ ನೀಡಿದ ಮಾಹಿತಿಯ ಗೂಗಲ್ ಮ್ಯಾಪ್‌ನಲ್ಲಿ ಮಾಹಿತಿ ಸಂಗ್ರಹವಾಗುವುದಲ್ಲದೆ, ಭೇಟಿ ನೀಡಿದ ದಿನಾಂಕ ಮತ್ತು ಸಮಯ ನಮೂದಾಗುತ್ತದೆ. ಈ ಮಾಹಿತಿಯನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಸಾಧ್ಯವಿಲ್ಲ.

ಇ-ಬೀಟ್ ವ್ಯವಸ್ಥೆಗೆ 'ಸುಬಾಹು' ಎಂದು ಹೆಸರಿಟ್ಟಿದ್ದು ಇದೊಂದು ಅಂಡ್ರಾಯ್ಡ್ ತಂತ್ರಾಂಶವಾಗಿರುತ್ತದೆ. ಈ ತಂತ್ರಾಂಶವು ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿರುತ್ತದೆ.

ಸುಬಾಹು ರೆಸಿಡೆಂಟ್-ಸಾರ್ವಜನಿಕರು ಈ ಆಪ್‌ನ್ನು ಬಳಸಿಕೊಂಡು ಲಾಕಡ್ ಹೌಸ್ ಮಾಹಿತಿಯನ್ನು ನೀಡಬಹುದಾಗಿರುತ್ತದೆ. ಅಂದರೆ ಸಾರ್ವಜನಿಕರು ಈ ಆಫ್‌ನ್ನು ಬಳಸಿಕೊಂಡು ತಾವು ವಾಸವಿರುವ ಮನೆಯ ಬೀಗ ಹಾಕಿ ಹೊರಗಡೆ ಹೋಗುವ ಸಂದರ್ಭದಲ್ಲಿ ಈ ರೆಸಿಡೆಂಟ್ ತಂತ್ರಾಂಶದ ಮುಖಾಂತರ ಅದು ಕೇಳುವಂತಹ ಮಾಹಿತಿಯನ್ನು ಅದರಲ್ಲಿ ಭರ್ತಿ ಮಾಡಿದಾಗ ಅದರ ಮಾಹಿತಿಯ ಸಂಬಂಧಪಟ್ಟ ಪೊಲೀಸ್ ಠಾಣೆಯ ಅಡ್ಮಿನ್‌ರವರಿಗೆ ರವಾನೆಯಾಗುತ್ತದೆ.

ಇದರಿಂದ ಠಾಣಾ ಸುಭಾಹು ಅಡ್ಮಿನ್‌ರವರು ರಾತ್ರಿ ಗಸ್ತಿಗೆ ಸಿಬ್ಬಂದಿಯನ್ನು ನೇಮಿಸುವಾಗ ಲಾಕಡ್ ಹೌಸ್ ಮನೆಗಳ ಮಾಹಿತಿಯನ್ನು ಸಂಬಂಧಿಸಿದ ಬೀಟ್ ಸಿಬ್ಬಂದಿಗೆ ತಂತ್ರಾಂಶದ ಮುಖಾಂತರ ನೀಡುತ್ತಾರೆ. ಇದರಿಂದ ಲಾಕಡ್ ಹೌಸ್ ಮನೆಗಳನ್ನು ಹಗಲು ಮತ್ತು ರಾತ್ರಿ ಸಮಯದಲ್ಲಿ ಗಮನಿಸಲು ಅನುಕೂಲವಾಗುತ್ತದೆ.

## ಗ್ರಾ.ಪಂ. ಮೀಸಲಾತಿ ನಿಯಮ ಬಾಹಿರ

ದಾವಣಗೆರೆ, ಫೆ.4- ದಾವಣಗೆರೆ ತಾಲ್ಲೂಕು ಗ್ರಾಮ ಪಂಚಾಯ್ತಿ ಅಧ್ಯಕ್ಷ-ಉಪಾಧ್ಯಕ್ಷರ ಹುದ್ದೆ ಮೀಸಲಾತಿ ನಿಗದಿ ನಿಯಮ ಬಾಹಿರವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿನ್ನಸಮುದ್ರ ಶೇಖರನಾಯ್ಕ ಆರೋಪಿಸಿದ್ದಾರೆ.

ಜಿಲ್ಲಾಧಿಕಾರಿಗಳು ರಾಜ್ಯ ಚುನಾವಣಾ ಆಯೋಗದ ಮಾಹಿತಿ ಪಡೆಯಬೇಕು. 1993ರಿಂದ ಇಲ್ಲಿಯವರೆಗೆ ಮೀಸಲಾತಿ ಹಂಚಿಕೆ ಮಾಡಿರುವ ಪಟ್ಟಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ಸಾಫ್ಟ್‌ವೇರ್ ಮೂಲಕ ಮಾಡಿರುವ ಆಯ್ಕೆಯನ್ನು ರದ್ದುಗೊಳಿಸ ಬೇಕು ಎಂದು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ನೇರ್ಲಿಗೆ, ಬಸವನಾಳು, ಕಂದನಕೋವಿ, ಮುದಹದಡಿ, ರಾಮಗೊಂಡನಹಳ್ಳಿ ಗ್ರಾ.ಪಂ.ಗಳಲ್ಲಿ 1993ರಿಂದ ಇಲ್ಲಿವರೆಗೆ ಎಸ್ಟಿ ಮೀಸಲಾತಿ ಬಂದಿಲ್ಲ. ಕೊಡಗನೂರು, ಲೋಕಿಕೆರೆ, ಹೊನ್ನೂರು, ಹದಡಿ ಗ್ರಾ.ಪಂ.ಗಳಲ್ಲಿ ಎರಡೆರಡು ಬಾರಿ ಎಸ್ಟಿ ಮೀಸಲಾತಿ ಪುನರಾವರ್ತನೆಯಾಗಿದೆ. ಈ ರೀತಿ ಮೀಸಲಾತಿ ನಿಗದಿಯಲ್ಲಿ ವ್ಯತ್ಯಾಸಗಳಾಗಿವೆ ಎಂದು ಉದಾಹರಿಸಿದರು.

## ಕಾಡು ಪ್ರಾಣಿಗಳ ಕಾಟಕ್ಕೆ ಕಳವಳ


**(1ನೇ ಪುಟದಿಂದ)** ಹಾವಳಿ ಮೇರೆ ಮೀರಿದೆ. ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಬಾಕಿ ಇರುವ ಎರಡು ಕೋಟಿ ರೂಪಾಯಿ ಪರಿಹಾರವನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಈ ಮಾತುಗಳಿಗೆ ಸದನದ ಬಹುತೇಕ ಸದಸ್ಯರು ಧ್ವನಿಗೂಡಿಸಿದಾಗ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಧ್ಯೆ ಪ್ರವೇಶಿಸಿ ಮಾತನಾಡಿ, ಈ ಸಮಸ್ಯೆ ಪರಿಹರಿಸಲು ಸರ್ಕಾರ ಗಂಭೀರ ಕ್ರಮ ಕೈಗೊಳ್ಳಬೇಕು. ಈ ವಿಷಯದಲ್ಲಿ ಹೆಚ್ಚಿನ ಚರ್ಚೆಗೆ ಸಮಯಾವಕಾಶ ನೀಡುತ್ತೇನೆ ಎಂದರು.

ಎಲ್ಲರ ಭಾವನೆಗಳಿಗೆ ಸ್ಪಂದಿಸಿದ ಅರಣ್ಯ ಸಚಿವ ಅರವಿಂದ ಲಿಂಬಾವಳಿ, ಈ ವಿಷಯದಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ. ಸಂಬಂಧಪಟ್ಟವರಿಗೆ ಪರಿಹಾರವನ್ನೂ ನೀಡಲಿದೆ ಎಂದು ಭರವಸೆ ನೀಡಿದರಲ್ಲದೆ ಸಮಗ್ರ ಚರ್ಚೆಗೆ ಸಿದ್ಧವಿರುವುದಾಗಿ ಸ್ಪಷ್ಟಪಡಿಸಿದರು.


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ**



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ವಾಸಿ **ಶ್ರೀಮತಿ ಕುಸುಮ ಶ್ರೀ ಎಸ್.ಜಿ. ಕರಿಬಸಪ್ಪ** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 29.01.2021ನೇ ಶುಕ್ರವಾರ ಸಾಯಂಕಾಲ 5.00 ಕ್ಕೆ ನನ್ನ ತಂದೆಯವರಾದ

**ಶ್ರೀ ಸಣ್ಣಗೌಡ್ರು ಲಿಂಗರಾಜಪ್ಪನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು** ದಿ: 6.2.2021ನೇ ಶನಿವಾರ ಬೆಳಿಗ್ಗೆ 11.00ಕ್ಕೆ ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ಮೃತರ ಸ್ವಗೃಹದಲ್ಲಿ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಕುಸುಮ, ಶ್ರೀ ಎಸ್.ಜಿ. ಕರಿಬಸಪ್ಪ ಮತ್ತು ಮಕ್ಕಳು, ಶ್ರೀಮತಿ ಜಯಶ್ರೀ, ಶ್ರೀ ಎಂ. ಸಿದ್ದೇಶ್ ಮತ್ತು ಮಕ್ಕಳು, ಶ್ರೀಮತಿ ರೇಖಾ, ಶ್ರೀ ಎಂ. ಸುರೇಶ್ ಮತ್ತು ಮಕ್ಕಳು, ಸಣ್ಣಗೌಡ್ರ ವಂಶಸ್ಥರು, ಹಿರೇತೊಗಲೇರಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು,

**ಫೋ. : 78924 40199, 97397 36782**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**14ನೇ ವರ್ಷದ ಪುಣ್ಯಸ್ಮರಣೆ**



**ದಿ॥ ಶ್ರೀಮತಿ ಶಾಂತಮ್ಮ ಓಬಣ್ಣನಹಳ್ಳಿ**

ಕಲ್ಲಿನಲ್ಲಿ ಚಿನ್ನ, ವೀಣೆಯಲ್ಲಿ ಶೃತಿ, ಹಾಲಿನಲ್ಲಿ ಬೆಣ್ಣೆ,
ಕಬ್ಬಿನಲ್ಲಿ ಸಿಹಿ ಬೆರೆತಂತೆ ನಮ್ಮೊಳಗೆ ನೀವು...
ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳು ಕಳೆದರೂ,
ನಮ್ಮ ಹೃದಯಲ್ಲಿ ಸದಾ ನೀವಿದ್ದೀರಿ. ನೀವು ನಡೆಸಿದ ಸರಳ
ಜೀವನ, ನಿಮ್ಮ ಆದರ್ಶ ಬದುಕು, ನೀವು ತೋರಿಸಿದ ಮಾರ್ಗವೇ
ನಮಗೆ ದಾರಿದೀಪ. ಸದಾ ನಿಮ್ಮ ಸ್ಮರಣೆಯಲ್ಲಿ.

**ಪತಿ : ದೊಡ್ಡಮನೆ ರೇವಣಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**


## ರೈತರಿಗೆ ಲಕ್ಷ ಕೋಟಿ ರೂ. ಆದಾಯ


**(1ನೇ ಪುಟದಿಂದ)** ಮಾತನಾಡಿದ ಅವರು ತಿಳಿಸಿದ್ದಾರೆ. ಘಾಜಿಪುರದಲ್ಲಿ ಸಂಗ್ರಹವಾಗಿರುವ ಕಸವನ್ನೂ ಸಹ ಶೀಘ್ರದಲ್ಲೇ ಸ್ವಚ್ಛಗೊಳಿಸಿ ಅದನ್ನೂ ಇಂಧನವಾಗಿ ಪರಿವರ್ತಿಸಲಾಗುವುದು ಎಂದೂ ಪ್ರಧಾನ್ ಹೇಳಿದ್ದಾರೆ. ಸರ್ಕಾರ 20 ಸಾವಿರ ಕೋಟಿ ರೂ. ಮೌಲ್ಯದ ಎಥೆನಾಲ್ ಅನ್ನು ಖರೀದಿಸುತ್ತಿದೆ. ಇದೂ ಸಹ ರೈತರ ಆದಾಯ ಹೆಚ್ಚಿಸಲಿದೆ ಎಂದೂ ಸಚಿವರು ತಿಳಿಸಿದ್ದಾರೆ.

### ಕೆ.ಆರ್.ಸಂಧ್ಯಾ ನಿಧನ



ರಾಮನಗರ ಜಿಲ್ಲೆ ಬಿಡದಿ ಹೋಬಳಿ ಭಕ್ತಿಪುರದ ಮುಖ್ಯ ಶಿಕ್ಷಕಿ, ಬೆಂಗಳೂರು ಕನ್ನಡಪ್ರಭ ಪತ್ರಿಕೆಯ ಹಿರಿಯ ಉಪ ಸಂಪಾದಕ ಬಿ. ಜೆ.ರಾಮಚಂದ್ರರಾವ್ ಅವರ ಧರ್ಮಪತ್ನಿ ಶ್ರೀಮತಿ ಕೆ.ಆರ್.ಸಂಧ್ಯಾ ಅವರು ದಿನಾಂಕ 3.02.2021 ರಂದು ಬುಧವಾರ ದೈವಾಧೀನರಾಗಿದ್ದಾರೆ.ಇವರು ಜನತಾವಾಣಿ ದಿನಪತ್ರಿಕೆ ವರದಿಗಾರ ಬಿ.ಜೆ. ಅನಂತ ಪದ್ಮನಾಭ ರಾವ್ ಇವರ ಅತ್ತಿಗೆ. ದಿನಾಂಕ 12.02.2021 ರಂದು ಶುಕ್ರವಾರ ಧರ್ಮೋದಕ ಹಾಗೂ 15.2.2021 ರಂದು ಭರಮಸಾಗರದಲ್ಲಿ ನಡೆಯಲಿದೆ

### ಬಂಡ್ರಿ ಮಂಜುನಾಥ್ ನಿಧನ



ದಾವಣಗೆರೆ ವಿನೋಬನಗರ 2ನೇ ಮೇನ್, 15 ನೇ ಕ್ರಾಸ್ ವಾಸಿ ಬಂಡ್ರಿ ಮಂಜುನಾಥ್ (55) ಅವರು ದಿನಾಂಕ 4.02.2021 ರಂದು ಗುರುವಾರ ಸಂಜೆ 6 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.02.2021 ರಂದು ಶುಕ್ರವಾರ ಮಧ್ಯಾಹ್ನ 12.30ಕ್ಕೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಹರಿಹರ : ಸೊಸೈಟಿಯಲ್ಲಿ ಕಳ್ಳತನ

ಹರಿಹರ, ಫೆ.4 - ನಗರದ ಶ್ರೀ ಬಸವೇಶ್ವರ ಕೋ ಆಪರೇಟಿವ್ ಸೊಸೈಟಿಯಲ್ಲಿ ರಾತ್ರಿ ವೇಳೆ ಕಳ್ಳರು ಬಾಗಿಲು ಒಡೆದು ಸುಮಾರು 45,648 ರೂ. ಕಳ್ಳತನ ಮಾಡಿದ್ದಾರೆ. ಎಂದಿನಂತೆ ಇಂದು ಬೆಳಗ್ಗೆ ಸಂಘದ ಕಚೇರಿ ಬಾಗಿಲು ತೆರೆದಾಗಲೇ ಕಳ್ಳತನ ನಡೆದಿರುವ ಬಗ್ಗೆ ಗೊತ್ತಾಗಿದೆ ಎಂದು ಸಂಘದ ಕಾರ್ಯದರ್ಶಿ ವೀರಯ್ಯ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳಾದ ಪಿಎಸ್‌ಐ ಲತಾ ಪಿ. ತಾಳೇಕರ್, ನಗರ ಠಾಣೆಯ ಪಿಎಸ್‌ಐ ಸುನಿಲ್ ಬಸವರಾಜ್ ಭೇಟಿ ನೀಡಿ ಪರಿಶೀಲಿಸಿದರು.

## ಹೈಕೋರ್ಟ್‌ಗಳಲ್ಲಿ ವಿಚಾರಣೆ ಆರಂಭ

**(1ನೇ ಪುಟದಿಂದ)** ವಿಚಾರಣೆಯನ್ನು ಆರಂಭಿಸಿಲ್ಲ ಎಂದು ಕೇಂದ್ರ ಕಾನೂನು ಸಚಿವ ರವಿ ಶಂಕರ್ ಪ್ರಸಾದ್ ತಿಳಿಸಿದ್ದಾರೆ. ಆಂಧ್ರ ಪ್ರದೇಶ ಗುಜರಾತ್, ಹಿಮಾಚಲ ಪ್ರದೇಶ ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಮಣಿಪುರ, ಒರಿಸ್ಸಾ, ಪಂಜಾಬ್ ಮತ್ತು ಹರಿಯಾಣ ಹಾಗೂ ಸಿಕ್ಕಿಂಗಳು ಈಗಲೂ ಆನ್‌ಲೈನ್ ಮೂಲಕ ವಿಚಾರಣೆ ನಡೆಸುತ್ತಿವೆ.

# ತರಳಬಾಳು ವಿದ್ಯಾಸಂಸ್ಥೆಯ ಉತ್ತಮ ಶಿಕ್ಷಕರಿಗೆ ಪ್ರಶಂಸನಾ ಪತ್ರ ವಿತರಣೆ



ಸಿರಿಗೆರೆ, ಫೆ.4- ತರಳಬಾಳು ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ಕೋವಿಡ್-19 ರ ಸಂಕಟದ ಸಮಯದಲ್ಲಿ ಯೂಟ್ಯೂಬ್ ಚಾನೆಲ್ ಮುಖಾಂತರ ಹೆಚ್ಚು ಪಾಠ ಬೋಧನೆ ಮಾಡಿ, ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಪ್ರಶಂಸನಾ ಪತ್ರ ನೀಡಲಾಗುತ್ತಿದೆ ಎಂದು ಆಡಳಿತಾಧಿಕಾರಿ ಪ್ರೊ.ಎಸ್.ಬಿ.ರಂಗನಾಥ್ ತಿಳಿಸಿದರು.

ವಿದ್ಯಾಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಶಿಕ್ಷಕರಿಗೆ ಮತ್ತು ಉಪನ್ಯಾಸಕರುಗಳಿಗೆ ಪ್ರಶಂಸನಾ ಪತ್ರ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳು ಮತ್ತು ಉಪನ್ಯಾಸಕರುಗಳು ಉತ್ತಮ ಸೇವೆಗಳನ್ನು ಸಲ್ಲಿಸುತ್ತಾ ಬಂದಿದ್ದಾರೆ. ಅದರಲ್ಲೂ ಕೆಲವರಲ್ಲಿ ವಿಶೇಷತೆಯನ್ನು ಗುರುತಿಸಲಾಗಿದೆ. ಕೊರೊನಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಬಳಸಿಕೊಂಡು ಉತ್ತಮ ಜ್ಞಾನ ದಾಸೋಹದ ಮಾಡಿರುತ್ತಾರೆ. ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಿದ್ಯಾ ಸಂಸ್ಥೆಯ ಶಿಕ್ಷಕರಿಗೆ ಇನ್ನು ಹೆಚ್ಚಿನ ಪ್ರೋತ್ಸಾಹ ನೀಡುವ ಸಲುವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತಂತ್ರಜ್ಞಾನದ ಬಳಕೆ ಮಾಡಿಕೊಂಡು ಹೊಸದಾಗಿ 'ಅಪ್ಲಿಕೇಷನ್' ಸಿದ್ಧಪ ಡಿಸಿಕೊಂಡು ಶಿಕ್ಷಕರುಗಳಿಗೆ ಯೂಟ್ಯೂಬ್ ಲಿಂಕ್ ಗಳನ್ನು ಬಳಸುವ ಮಾಹಿತಿ ನೀಡಲಾಗಿತ್ತು. ಸಮರ್ಪಕವಾಗಿ ಬಳಸಿಕೊಂಡಿದ್ದು ಶ್ಲಾಘನೀಯವಾದುದು ಎಂದರು.

ವಿಶೇಷಾಧಿಕಾರಿ ಡಾ.ಹೆಚ್.ವಿ.ವಾಮದೇವಪ್ಪ ಮಾತನಾಡಿ, ಕೊರೊನಾದಂತಹ ವಿಷಮ ಪರಿಸ್ಥಿತಿಯಲ್ಲಿ ಶೈಕ್ಷಣಿಕ ಪ್ರಗತಿ ಕುಂಠಿತಗೊಳ್ಳಬಾರದು. ವಿದ್ಯಾರ್ಥಿಗಳಿಗೆ ಶಿಕ್ಷಕರ ಸೇವೆಯೇ ಮೊದಲ ಆದ್ಯತೆ ಪರಿಗಣಿಸಿ ಕ್ರಮಕೈಗೊಳ್ಳಲಾಗಿದೆ. ವಿದ್ಯಾಸಂಸ್ಥೆಯ ನಿಯಮಾನುಸಾರ ಸೆಪ್ಟಂಬರ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ 75 ದಿನಗಳಲ್ಲಿ 138 ಯೂಟ್ಯೂಬ್ ಕ್ಲಾಸ್ ಮಾಡುವ ಮೂಲಕ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅದರಲ್ಲಿ 20 ಆಯ್ಕೆ ಮಾಡಿಕೊಂಡು ಪ್ರಶಂಸನಾ ಪತ್ರ ನೀಡುತ್ತಿದ್ದೇವೆ ಎಂದು ತಿಳಿಸಿದರು.

ಪಿ.ಶಿವಗಂಗಮ್ಮ, ಬಿ.ಜಿ.ಗೋವರ್ದನ, ಬಿ. ಶಶಿಕಲಾ, ಈ.ದೇವರಾಜು, ಎಜಿಎಮ್.ಪದ್ಮಾವತಿ, ಹರ್ಷಿತಾ, ಬಿ.ಎಂ.ಪ್ರವೀಣ, ಎಸ್.ಶಿವಕುಮಾರ್, ಜೆ.ಎಂ.ನವೀನ್, ಆರ್.ವಿದ್ಯಾಶ್ರೀ, ಸಿ.ಬಸವಕುಮಾರ, ಜಿ.ಜೆ.ಸತೀಶ್, ಬಿ.ಎಸ್.ಅರುಣ್‌ಕುಮಾರ್, ಎನ್. ಸಂಧ್ಯಾ, ಕೆ.ಆರ್.ಬಸವರಾಜು, ಎಸ್.ಗೀತಮ್ಮ, ಹೆಚ್. ಕೋಮಲಾ, ಕೆ.ಎನ್.ನಟರಾಜು, ಎಂ.ಪ್ರಮೀಳಾ, ಎಂ.ಎಲ್.ಸುದರ್ಶನ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ಪ್ರಶಂಸನಾ ಪತ್ರ ನೀಡಲಾಯಿತು.

# ಇಂಧನ, ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಖಂಡನೆ

## ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಪ್ರತಿಭಟನೆ

ದಾವಣಗೆರೆ, ಫೆ.4- ಪೆಟ್ರೋಲ್, ಡೀಸೆಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ವತಿಯಿಂದ ನಗರ ಪಾಲಿಕೆ ಮುಂಭಾಗದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ತಮ್ಮ ಸರ್ಕಾರ ಬಂದರೆ ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆ ಇಳಿಸುವುದಾಗಿ ಹೇಳಿ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇತ್ತೀಚೆಗೆ ಮಂಡನೆಯಾದ ಬಜೆಟ್‌ನಲ್ಲಿ 60 ರೂ.ಗೆ ಇದ್ದ ಪೆಟ್ರೋಲ್ ದರವನ್ನು 100ಕ್ಕೆ ಹಾಗೂ 40 ರೂ.ಗೆ ಇದ್ದ ಡೀಸೆಲ್ ಬೆಲೆಯನ್ನು 90 ರೂ.ಗೆ ಮತ್ತು ಅಡುಗೆ ಎಣ್ಣೆಯನ್ನು 140 ರೂ.ಗೆ, ಸಿಲಿಂಡರ್ ಅನ್ನು 750 ರಿಂದ 800 ರೂ.ಗೆ ಏರಿಕೆ ಮಾಡಿದ್ದು,



ಅಗತ್ಯ ವಸ್ತುಗಳ ಬೆಲೆಯನ್ನೂ ಸಹ ಗಗನಮುಖಿಯಾಗಿಸಿ ಜನಸಾಮಾನ್ಯರಿಗೆ ಬೆಲೆ ಏರಿಕೆಯ ಬರೆ ಹಾಕಿರುವುದಾಗಿ ಅಸಮಾಧಾನ ವ್ಯಕ್ತಪಡಿಸಿದರು.

ಸ್ಥಳೀಯ ನಗರ ಪಾಲಿಕೆಯಲ್ಲಿ ಗದ್ದುಗೆ ಏರಲು ಬಿಜೆಪಿ ವಾಮಮಾರ್ಗ ಹಿಡಿದಿದ್ದು, ಮತದಾರರಲ್ಲದವರನ್ನೆಲ್ಲಾ ಮತದಾರರ ಪಟ್ಟಿಗೆ ಸೇರಿಸಿ ಅಧಿಕಾರ ಹಿಡಿಯಲು ಹವಣಿಸುತ್ತಿದೆ. ಇದಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಅವಕಾಶ ನೀಡುವುದಿಲ್ಲ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಪುನಃ ಅಧಿಕಾರಕ್ಕೆ ಬಂದೇ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಎಸ್. ಮಲ್ಲಿಕಾರ್ಜುನ್ ಮಾತನಾಡಿ, ಭ್ರಷ್ಟ ಬಿಜೆಪಿ ಸರ್ಕಾರ ಬೆಲೆ ಏರಿಕೆ ಮಾಡಿ ಬಡವರನ್ನು ಹಿಂಸಿಸುತ್ತಿದ್ದು, ಅವರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನೆಲ್ಲಾ ಧ್ವಂಸ ಮಾಡಿ ಬಡವರ ಸಮಾಧಿ ಕಟ್ಟುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕರ ವಿಭಾಗದ ಕಾರ್ಯಾಧ್ಯಕ್ಷ ಸುಭಾನ್ ಸಾಬ್, ಲಿಯಾಖತ್ ಅಲಿ, ಮಮ್ತಾತಾಜ್ ಬೇಗಂ, ಇಟ್ಟಿಗುಡಿ ಮಂಜುನಾಥ, ದಾಕ್ಷಾಯಿಣಮ್ಮ ಮಲ್ಲಿಕಾರ್ಜುನ ಇಂಗಳೇಶ್ವರ, ಕೆ.ಹೆಚ್. ಮಂಜುನಾಥ, ಅಬ್ದುಲ್ ಜಬ್ಬಾರ್, ಆರ್.ಬಿ.ಝುಡ್ ಬಾಷಾ, ಹೆಚ್. ಹರೀಶ್, ಜಾಕೀರ್, ರಹೀಂ, ದಾದಾಪೀರ್, ನದೀಂ, ಹನುಮಂತಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

# ಮೈಸೂರು ಮುಕ್ತ ವಿ.ವಿ.ಯಲ್ಲಿ ಎಂ.ಎಸ್.ಡಬ್ಲ್ಯೂ. ಪದವಿ ಪರೀಕ್ಷೆಗೆ ಮನವಿ

ಬೆಂಗಳೂರು, ಫೆ.4- ಮೈಸೂರಿನ ಮಾನಸ ಗಂಗೋತ್ರಿ ಮುಕ್ತ ವಿವಿಯಲ್ಲಿ ತಡೆ ಹಿಡಿದಿರುವ ಎಂಎಸ್‌ಡಬ್ಲ್ಯೂ ಪದವಿ ಪರೀಕ್ಷೆಗಳನ್ನು ನಡೆಸಲು ಅನುಕೂಲವಾಗುವಂತೆ ರಾಜ್ಯ ಸರ್ಕಾರ ಯುಜಿಸಿಗೆ ಮನವಿ ಮಾಡಿರುವುದಾಗಿ ಸಚಿವ ಸುರೇಶ್‌ಕುಮಾರ್ ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ಸುಭಾಷ್ ಗುತ್ತೇದಾರ್ ಅವರ ಪ್ರಶ್ನೆಗೆ ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ ಪರವಾಗಿ ಉತ್ತರಿಸಿದ ಸಚಿವರು, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂಎಸ್‌ಡಬ್ಲ್ಯೂ ಪದವಿ ಪರೀಕ್ಷೆಗಳನ್ನು 2015ರಿಂದಲೇ ಸ್ಥಗಿತಗೊಳಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ತೊಂದರೆಯನ್ನು ಗಮನಿಸಿ ಇದನ್ನು ಪುನರಾರಂಭಿಸಬೇಕೆಂದು ಯುಜಿಸಿಗೆ ಮನವಿ ಮಾಡಿರುವುದಾಗಿ ಹೇಳಿದರು.

ದ್ವಿತೀಯ ಎಂಎಸ್‌ಡಬ್ಲ್ಯೂ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಅನುಕೂಲವಾದಂತಹ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ. ಕರ್ನಾಟಕ ಮುಕ್ತ ವಿವಿಯು ಯುಜಿಸಿಯ ನಿಯಮಗಳನ್ನು ಉಲ್ಲಂಘಿಸಿ ಶೈಕ್ಷಣಿಕ ಚಟುವಟಿಕೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಯುಜಿಸಿ ಈ ಕ್ರಮ ತೆಗೆದುಕೊಂಡಿದೆ ಎಂದರು.

# ನಗರದಲ್ಲಿಂದು ಸ್ಲಗ್ ಸ್ಯಾಂಡ್ ಪ್ರಾರಂಭ

ಜೆಎಸ್‌ಡಬ್ಲ್ಯೂ ಸಿಮೆಂಟ್ ಕಂಪನಿ ವತಿಯಿಂದ ಇಂದು ಬೆಳಿಗ್ಗೆ 11 ಕ್ಕೆ ಅಪೂರ್ವ ರೆಸಾರ್ಟ್‌ನಲ್ಲಿ 'ಸ್ಲಗ್ ಸ್ಯಾಂಡ್' ಪ್ರಾರಂಭೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ನಿವೃತ್ತ ಪ್ರಾಧ್ಯಾಪಕ ಎನ್. ರೇವಣಸಿದ್ದಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಯಾಗಿ ಡಾ. ಎಲ್.ಆರ್. ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ. ಎಸಿಸಿಇ ಛೇರ್ಮನ್ ಜಿ.ಎಂ. ಲೋಹಿತಾಶ್ವ ಅಧ್ಯಕ್ಷತೆ ವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ಇ.ದೇವೇಂದ್ರಪ್ಪ, ಶಿವಪ್ರಕಾಶ್ ಕೆ.ಶಾಸ್ತ್ರಿ, ಕೆ.ಎನ್.ಷಣ್ಮುಖ ಭಾಗವಹಿಸಲಿದ್ದಾರೆ.

# ಕಾಶೀಪುರ ಕೆನರಾ ಬ್ಯಾಂಕ್ ಶಾಖೆ ವಿಲೀನ : ಪ್ರತಿಭಟನೆ



ದಾವಣಗೆರೆ, ಫೆ.4- ತಾಲ್ಲೂಕಿನ ಕಾಶೀಪುರದಲ್ಲಿರುವ ಕೆನರಾ ಬ್ಯಾಂಕ್ ಶಾಖೆಯನ್ನು ಲೋಕಿಕೆರೆಯ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸುವುದನ್ನು ಖಂಡಿಸಿ ಕಾಶೀಪುರ ಗ್ರಾಮಸ್ಥರು ಇಂದು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮ ಪಂಚಾಯತ್ ಸದಸ್ಯ ಗುರುಮೂರ್ತಿ, ಕಾಶೀಪುರ ಕೆನರಾ ಬ್ಯಾಂಕ್ ಶಾಖೆ ಕಳೆದ 5 ವರ್ಷಗಳ ಹಿಂದೆ ಆರಂಭಗೊಂಡಿದ್ದು, 5 ಕೋಟಿ ರೂ. ಠೇವಣಿ ಹೊಂದಿರುವ ಬ್ಯಾಂಕ್ ಇಲ್ಲಿಯವರೆಗೂ 19 ಕೋಟಿ 83 ಲಕ್ಷ ರೂ ವಹಿವಾಟು ನಡೆಸಿದೆ. ಸುಮಾರು 2 ಕೋಟಿ ರೂ. ಬಂಗಾರದ ಮೇಲೆ ಸಾಲ ನೀಡಲಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘದ 120 ಜನ ಕೂಡ ತಿಂಗಳಿಗೆ ಎರಡು ಬಾರಿ ಬಟವಾಡೆ ಮಾಡಿಕೊಳ್ಳುತ್ತಿದ್ದಾರೆ. ನೆಟ್‌ವರ್ಕ್ ಸಮಸ್ಯೆಯ ಕಾರಣ ಮುಂದೊಡ್ಡಿ ಬ್ಯಾಂಕ್ ಮುಚ್ಚಲಾಗುತ್ತಿದೆ ಎಂದು ಆರೋಪಿಸಿದರು.

ಕಾಶೀಪುರದಲ್ಲಿ ಮುಚ್ಚುವ ಕೆನರಾ ಬ್ಯಾಂಕ್ ಶಾಖೆಯನ್ನು ಲೋಕಿಕೆರೆಯಲ್ಲಿರುವ ಅದೇ ಕೆನರಾ ಬ್ಯಾಂಕಿನಲ್ಲಿ ವಿಲೀನಗೊಳಿಸಲಾಗುತ್ತಿದೆ. ಇದರಿಂದ ಕಾಶೀಪುರದಲ್ಲಿ ಖಾತೆ ಹೊಂದಿದ್ದ ರಾಮಗೊಂಡನಹಳ್ಳಿ, ಮಳಲಕೆರೆ, ಗೋಪನಾಳು, ಅತ್ತಿಗೆರೆ, ರಾಜುಗಾರು ಕ್ಯಾಂಪ್, ವೆಂಕಟೇಶ್ವರ ಕ್ಯಾಂಪ್‌ನ 2 ಸಾವಿರಕ್ಕೂ ಅಧಿಕ ಜನರಿಗೆ ತೊಂದರೆಯಾಗಲಿದೆ. 6 ಕಿ.ಮಿ. ದೂರವಿರುವ ಲೋಕಿಕೆರೆಗೆ ಬ್ಯಾಂಕಿನ ವ್ಯವಹಾರಕ್ಕಾಗಿ ತೆರಳಲು ಬಸ್ ಅಥವಾ ಆಟೋ ವ್ಯವಸ್ಥೆ ಇಲ್ಲ. ಇದರಿಂದ ವಯೋವೃದ್ಧರು ಮತ್ತು ಅಂಗವಿಕಲರು ಪಿಂಚಣಿ ಪಡೆಯಲು ಇನ್ನು ಮುಂದೆ ಸಾಕಷ್ಟು ಕಷ್ಟ ಪಡಬೇಕಾಗುತ್ತದೆ. ಈ ಸಂಬಂಧ ಈಗಾಗಲೇ ಸಂಸದರು, ಶಾಸಕರು ಮತ್ತು ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದರೂ ಬ್ಯಾಂಕನ್ನು ಕಾಶೀಪುರದಲ್ಲಿ ಉಳಿಸಲು ಮುಂದಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಗ್ರಾಮದ ಮುಖಂಡರಾದ ಪಾಲಾಕ್ಷಪ್ಪ, ರುದ್ರಪ್ಪ, ಮಾದಪ್ಪ, ಎಸ್.ಡಿ.ಗಿರೀಶ್ ಓಂಕಾರ ಮೂರ್ತಿ, ಜಗದೀಶ್, ವಜ್ರಮುನಿ, ಸಾದರಹಳ್ಳಿ ವಿನಯ್, ಗೌಡ್ರ ಮಹೇಶ್ವರಪ್ಪ, ಎಸ್. ಎಂ.ವಿಶ್ವನಾಥ್, ಮೇಷ್ಟ್ರು ಈಶಣ್ಣ, ಪಂಚಾಕ್ಷರಿ ಗ್ರಾಪಂ ಸದಸ್ಯೆ ಮಂಜುಳಾ ನಾಗರಾಜ್, ಮಂಜುಳಾ ಚಂದ್ರಶೇಖರ್, ಕಮಲಮ್ಮ, ಗೌರಮ್ಮ, ಸಂಗಮ್ಮ ಸೇರಿದಂತೆ, ಇತರರು ಭಾಗವಹಿಸಿದ್ದರು.

# ಹರಿಹರದ ರಾಮಕೃಷ್ಣಾಶ್ರಮದಿಂದ ಸ್ವಾಮಿ ವಿವೇಕಾನಂದರ ಜಯಂತಿ



ಹರಿಹರ, ಫೆ.4- ನಗರದ ಶ್ರೀ ರಾಮಕೃಷ್ಣಾಶ್ರಮದ ವತಿಯಿಂದ ಸ್ವಾಮಿ ವಿವೇಕಾನಂದರ 159 ನೇ ಜಯಂತಿ ಅಂಗವಾಗಿ ಇಲ್ಲಿನ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಬಡ ರೋಗಿಗಳಿಗೆ ಹಣ್ಣು, ಹಂಪಲು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಆಶ್ರಮದ ಅಧ್ಯಕ್ಷರಾದ ಶ್ರೀ ಶಾರದೇಶಾನಂದ ಸ್ವಾಮಿಗಳು ಮಾತನಾಡಿ, ಶಿವಭಾವದಲ್ಲಿ ಜನ ಸೇವೆ ಮಾಡುವುದೇ ನಿಜವಾದ ಧರ್ಮ. ನಿಜವಾದ ಪೂಜೆ ಎಂದರೆ ಮೂರ್ತಿಯಲ್ಲಿ ದೇವರನ್ನು ಕಂಡು ಪೂಜೆ ಮಾಡುವುದರ ಜೊತೆಗೆ ಮನುಷ್ಯನಲ್ಲಿರುವ ದೇವರ ಪೂಜೆ ಮಾಡಬೇಕು ಎಂಬ ನವನೂತನ ಸಂದೇಶವನ್ನು ವಿವೇಕಾನಂದರು ನೀಡಿದ್ದಾರೆ ಎಂದರು.

ಹಳೆಯ ವೇದಗಳು ಮಾತೃದೇವೋಭವ, ಪಿತೃದೇವೋಭವ, ಅತಿಥಿ ದೇವೋಭವ ಎಂದಿವೆ. ಈ ಕಲಿಯುಗದಲ್ಲಿ ಹೊಸ ದೇವರನ್ನು ನಾನು ಹೇಳುವುದಕ್ಕಿಂತ ರೋಗಿ ದೇವೋಭವ, ದೀನದೇವೋಭವ ಆಗಬೇಕು ಎಂದು ಕರೆ ನೀಡಿದರು.

ಈ ಆದರ್ಶದ ಹಿನ್ನೆಲೆಯಲ್ಲಿ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಹಣ್ಣು ಹಾಗೂ ಬಿಸ್ಕೆಟ್‌ಗಳನ್ನು ನೀಡಿ ಸೇವೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಡಾ. ಶಾರದಾದೇವಿ, ಶ್ರೀಧರ ಭೂತೆ, ಪ್ರಮೋದ ಬೀಳಗಿ, ಗಗನ ಹಾಗೂ ಆಸ್ಪತ್ರೆಯ ಸಿಬ್ಬಂದಿಯವರು, ಶೋಭಾ, ಲಿಂಗರಾಜ್, ಸುಮಂಗಳ, ಸವಿತಾ, ಗೀತಾ, ರೂಪ, ಶಶಿಕಾಂತ್ ಇನ್ನಿತರರಿದ್ದರು.

# ಕೂಡ್ಲಿಗಿ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸಭೆ

ಕೂಡ್ಲಿಗಿ, ಫೆ.4-ತಾಲ್ಲೂಕು ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಸಭೆಯನ್ನು ಇತ್ತೀಚೆಗೆ ನಡೆಸಲಾಯಿತು.

ಕಾರ್ಯಕ್ರಮಕ್ಕೆ ರಾಜ್ಯ ಯುವ ಮೋರ್ಚಾ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಯುವ ಮೋರ್ಚಾ ಉಸ್ತುವಾರಿಗಳಾದ ಮಂಜುನಾಥ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಅಡವಿ ಸ್ವಾಮಿ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸೋಮನಗೌಡ್ರು, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ಶರಣ ನವಲಿ ಹಾಗೂ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾದ ಸುದರ್ಶನ್, ಪವನ್ ಕುಮಾರ್ ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ, ಕೂಡ್ಲಿಗಿ ತಾಲ್ಲೂಕು ಉಸ್ತುವಾರಿ ಸೂರ್ಯ ಪಾಪಣ್ಣ, ಮಂಡಲ ಅಧ್ಯಕ್ಷ ಚೆನ್ನಪ್ಪ, ಪ್ರಧಾನ ಕಾರ್ಯದರ್ಶಿ ಶರಣಗೌಡ್ರು ಮಂಜುನಾಥ್ ಉಪಸ್ಥಿತರಿದ್ದರು.

# ಹೆಮ್ಮನಬೇತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಆಯ್ಕೆ



ದಾವಣಗೆರೆ, ಫೆ.4- ತಾಲ್ಲೂಕಿನ ಹೆಮ್ಮನಬೇತೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಬಿ.ಎಸ್ ಕಾಳಮ್ಮ ಉಪಾಧ್ಯಕ್ಷರಾಗಿ ಯಶೋಧಮ್ಮ ರೇವಣಸಿದ್ದಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಸದಸ್ಯರುಗಳಾದ ಯು.ಜಿ ಶಿವಕುಮಾರ್ ಜಯ್ಯಪ್ಪ ಎಸ್.ವಿ ಮಲ್ಲಿಕಾರ್ಜುನ್, ಸಿದ್ದೇಶ್ ಬಣಕಾರ್, ಪ್ರಕಾಶ್, ಮುಖ್ಯ ಕಾರ್ಯನಿರ್ವಾಹಕರಾಗಿ ಯು.ಎಂ ಅಜಯ್ ಮತ್ತಿತರರು ಉಪಸ್ಥಿತರಿದ್ದರು. ಚುನಾವಣಾ ಅಧಿಕಾರಿಯಾಗಿ ಜಯಪ್ರಕಾಶ್ ಕಾರ್ಯ ನಿರ್ವಹಿಸಿದರು.

# ಬಿ. ವಾಮದೇವಪ್ಪರಿಗೆ ಶಿಷ್ಯ ವೃಂದದಿಂದ ಗುರುವಂದನೆ



ದಾವಣಗೆರೆ, ಫೆ.4- ಅತ್ತಿಗೆರೆಯ ತರಳ ಬಾಳು ವಿದ್ಯಾಸಂಸ್ಥೆಯ ಶ್ರೀ ಪಟೇಲ್ ನಂದ್ಯಪ್ಪ ಹೊರಟ್ಟಿ ಗೌಡ್ರ ಕಲ್ಲಪ್ಪ ಪ್ರೌಢಶಾಲೆಯ 1985-86 ನೇ ಸಾಲಿನ ಹಿರಿಯ ವಿದ್ಯಾರ್ಥಿಗಳು ನಗರದ ಕೆಇಬಿ ಅತಿಥಿ ಗೃಹ ಸಭಾಂಗಣದಲ್ಲಿ ಮೊನ್ನೆ ಏರ್ಪಡಿಸಿದ್ದ ಸಮಾರಂಭದಲ್ಲಿ ತಮ್ಮ ಗುರುಗಳೂ ಆಗಿರುವ ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅವರಿಗೆ ಗುರು ವಂದನೆ ಸಲ್ಲಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಾಮದೇವಪ್ಪ ಅವರು, ಹರ ಮುನಿದರೂ ಗುರು ಕಾಯುವನು ಎಂಬುದನ್ನು ಸ್ಮರಿಸುತ್ತಾ, ಅಂತಹ ಗುರುವಿನ ಸ್ಥಾನವನ್ನು ಕಳೆದ 35 ವರ್ಷಗಳ ಕಾಲ ತರಳಬಾಳು ವಿದ್ಯಾಸಂಸ್ಥೆಯಲ್ಲಿ ನಿರ್ವಹಿಸಿದ್ದು, ನನ್ನ ಪೂರ್ವ ಜನ್ಮದ ಪುಣ್ಯ ಎಂದು ಹೇಳಿದರು. ನನ್ನ ಶಿಷ್ಯಂದಿರನೇಕರು ಉನ್ನತ ಸ್ಥಾನಗಳಲ್ಲಿದ್ದು, ಗುರುವನ್ನು ಮೀರಿದ ಶಿಷ್ಯರಾಗಿರುವುದು ಸಂತಸ ತಂದಿದೆ ಎಂದು ಮನದುಂಬಿ ಹರಸಿದರು.

ಶಿಕ್ಷಕನಾಗಿ ಹಾಗೂ ಸಾಹಿತ್ಯ, ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಹಲವು ಸನ್ಮಾನಗಳು, ಗೌರವಗಳು ಲಭಿಸಿವೆ.

ಅವೆಲ್ಲಕ್ಕೂ ಮಿಗಿಲಾದದ್ದು ನೀವು ಸಲ್ಲಿಸುತ್ತಿರುವ ಈ ಗೌರವ ಹಾಗೂ ನಿಮ್ಮ ಹೃದಯ ಶ್ರೀಮಂತಿಕೆ. ಇದು ನನ್ನ ಜೀವನದಲ್ಲಿ ಮರೆಯಲಾರದ ಕ್ಷಣಗಳು ಎಂದು ತಮ್ಮ ಅನುಭವ ಹಂಚಿಕೊಂಡರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ಶ್ರೀಮತಿ ರುದ್ರಾಕ್ಷಿ ಸಿ.ಕೆ. ಪುಟ್ಟನಾಯ್ಕ ಮಾತನಾಡಿ, ತಮ್ಮ ಇಂದಿನ ಈ ಸಾಧನೆಗೆ ವಾಮದೇವಪ್ಪನವರೇ ಕಾರಣ ಎಂದು ಗುರು ವಂದನೆ ಸಲ್ಲಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ವಿದ್ಯಾರ್ಥಿ ಮಂಜುನಾಥ್ ಬಾಬು ವಹಿಸಿದ್ದರು. ಶಾಂತಕುಮಾರಿ, ಎಚ್.ಕೆ. ಶಿವಕುಮಾರ್, ಎಇಇ ಜಿ.ಎಂ. ನಾಯಕ್, ಸಾವಿತ್ರಮ್ಮ, ಪರಮೇಶ್, ಸಿ.ಕೆ. ನಾಗರಾಜ್, ರುದ್ರೇಶ್, ನಾಗರಾಜ್ ಸೇರಿದಂತೆ 40 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಕಾರ್ಯಕ್ರಮ ನಡೆಸಿಕೊಟ್ಟರು.

ಹಿರಿಯ ವಿದ್ಯಾರ್ಥಿನಿ ಸಾವಿತ್ರಮ್ಮ ಪ್ರಾರ್ಥಿಸಿದರು. ಎ. ಎಸ್. ಮಂಜಪ್ಪ ನಿರೂಪಿಸಿದರು.

# ಕವನಗಳಿಗೆ ಅನುಭವ - ಅನುಭಾವ ಮುಖ್ಯ



ಚಿತ್ರದುರ್ಗ, ಫೆ.4- ಕವನಗಳನ್ನು ರಚಿಸುವಾಗ ಅನುಭವ, ಅನುಭಾವ ಎರಡೂ ಅಂಶಗಳು ಮಠಗಳಿಗೆ ಮಾತ್ರ ಸೀಮಿತವಾಗುತ್ತಿವೆ. ಆದರೆ ಕವಿಗಳಲ್ಲಿ ಅದು ಒಡಮೂಡಬೇಕು ಎಂದು ವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಅಧ್ಯಕ್ಷ ಡಾ. ರೇವಣ್ಣ ಬಳ್ಳಾರಿ ಹೇಳಿದರು.

ಇಲ್ಲಿನ ರೋಟರಿ ಭವನದಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿದ್ದ ವಿಕಲಚೇತನರ ದಿನಾಚರಣೆ ಮತ್ತು ರಾಜ್ಯಮಟ್ಟದ ಕವಿಗೋಷ್ಠಿ, ಸಾಧಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜ ಸಂಘಟನೆಯ ಅಂಶಗಳು, ಪ್ರಸ್ತುತ ಘಟನೆಗಳು ಕವನಗಳಾಗಿ ಹರಿದು ಬರಬೇಕು. ಡಿವಿಜಿ, ಕುವೆಂಪು, ಸಿಪಿಕೆ ಅಂತವರ ಕವನಗಳನ್ನು ಯುವ ಸಮೂಹ ಅಧ್ಯಯನ ಮಾಡಬೇಕು. ಮಹಾರಾಜರು, ಅರಸರು, ಚಕ್ರವರ್ತಿಗಳು ಹಿಂದೆ ತಮ್ಮ ಆಸ್ಥಾನದಲ್ಲಿ ಕವಿಗಳನ್ನು ಪೋಷಿಸುತ್ತಿದ್ದರು. ಅಂತಹ ಸೂಕ್ಷ್ಮ ಮನಸಿನ ಕವಿಗಳನ್ನು ಸಾಹಿತಿಗಳು ಮಾಡಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಕೊರ್ಲಕುಂಟೆ ತಿಪ್ಪೇಸ್ವಾಮಿ ಮಾತನಾಡಿ, ಕನ್ನಡ ಕಾವ್ಯ ಪ್ರಾಚೀನ ಕಾಲದಿಂದಲೂ ವೈವಿಧ್ಯಮಯವಾಗಿ ಬೆಳೆದು ಬಂದಿದೆ. ಕಾವ್ಯ ಮೀಮಾಂಸೆಯ ಮೌಲ್ಯತೆ ಮತ್ತು ಘನತೆಯನ್ನು ಬರಹಗಾರರು ಕಾಪಾಡಿಕೊಂಡು, ಸಾಹಿತ್ಯ ರಚನೆ ಮಾಡಬೇಕಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಗೌರವ ಕಾರ್ಯದರ್ಶಿ ಮಾಲತೇಶ್ ಅರಸ್, ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ಅಧ್ಯಕ್ಷೆ ದಯಾ ಪುತ್ತೂರ್‌ಕರ್, ರೋಟರಿ ಕ್ಲಬ್ ಚಿನ್ಮೂಲಾದ್ರಿ ಅಧ್ಯಕ್ಷರಾದ ನಾಗರಾಜ್ ಸಂಗಮ್, ಹೊಸದುರ್ಗ ತಾಲ್ಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷರಾದ ಧನಂಜಯ ಮೆಂಗಸಂದ್ರ, ವಿಶೇಷ ಚೇತನರ ವೀಣಾಪಾಣಿ, ಸಾಹಿತ್ಯ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಕೆ. ಹೆಚ್. ಜಯಪ್ರಕಾಶ್, ಸಾಹಿತಿ ಪರಶುರಾಮ್ ಗೊರಪ್ಪರ್, ಹಾಸ್ಯ ಸಾಹಿತಿ ಪಿ. ಜಗನ್ನಾಥ್, ಡಿ. ಕಲ್ಲೇಶ್ ಮೌರ್ಯ ಮಾತನಾಡಿದರು.

ಮಂಜುನಾಥ್ ಅಂಗವಿಕಲ ಸೇವಾ ಸಂಘದ ಅಧ್ಯಕ್ಷ ಮಾರುತಿ ತಮಟಕಲ್ಲು ಮತ್ತಿತರರು ಉಪಸ್ಥಿತರಿದ್ದರು. ಯುವ ಸಾಹಿತಿ ಶಿವು ಆಲೂರು, ಕೊರೊನಾ ವಾರಿಯರ್ಸ್ ನಂಜುಂಡೇಶ್, ಮಹೇಶ್ ಸೂರಮ್ಮನಹಳ್ಳಿ ಅವರನ್ನು ಸನ್ಮಾನಿಸಲಾಯಿತು.


## ದಾಖಲಾತಿ ಕಳೆದಿದೆ

ನಾನು **ಶ್ರೀ ಮಂಜುಶ್ರೀ ಗೌಡರ ಬಿನ್ ಎಸ್.ಜಿ. ಸುಂದರೇಶ್ ಗೌಡ,** ವಿಳಾಸ : 177, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ವಾಸಿಯಾದ ನಾನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ,
ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುವ ಖಾನೇಷುಮಾರಿ ಆಸ್ತಿ ನಂ. 589-89, ಸೈಟ್ ನಂ. 89, ಅಳತೆ : ಪೂರ್ವ-ಪಶ್ಚಿಮ 9.144 ಮೀಟರ್ಸ್, ಉತ್ತರ-ದಕ್ಷಿಣ 18.288 ಮೀಟರ್ಸ್, (167.23 ಚದರ ಮೀಟರ್ಸ್) ಮತ್ತು 64.66 ಚದರ ಮೀಟರ್ಸ್ ಆರ್.ಸಿ.ಸಿ. ಮನೆಗೆ ಸಂಬಂಧಪಟ್ಟಂತಹ ಆಸ್ತಿಯ ಪತ್ರವನ್ನು ಜನತಾ ಬಜಾರ್ ಬಳಿ ಜೆರಾಕ್ಸ್ ಮಾಡಿಸಲು ಹೋದ ಸಂದರ್ಭದಲ್ಲಿ ನನ್ನ ಮನೆಯ ಆಸ್ತಿ ಪತ್ರ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ನಾನು ಎಲ್ಲಿ ಹುಡುಕಿದರೂ ಸಿಕ್ಕಿರುವುದಿಲ್ಲ, ಕಾರಣ ಈ ಕಾಗದ ಪತ್ರಗಳು ಯಾರಿಗಾದರೂ ಸಿಕ್ಕಿದಲ್ಲಿ ಕೂಡಲೇ ಈ ನಂಬರಿಗೆ ಸಂಪರ್ಕಿಸಿ :

**ಮೊಬೈಲ್ : 94811 63444**

## ಬೇಕಾಗಿದ್ದಾರೆ

ನಗರದ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನ ಬಾಲಕರ ವಿದ್ಯಾರ್ಥಿನಿಲಯಕ್ಕೆ ಈ ಕೆಳಕಂಡವರು ಬೇಕಾಗಿದ್ದಾರೆ.

**ಹೆಡ್ ಕುಕ್ (ನಾರ್ತ್ / ಸೌತ್ ಇಂಡಿಯನ್)**
**ಅಸಿಸ್ಟೆಂಟ್ ಕುಕ್ ( ನಾರ್ತ್ / ಸೌತ್ ಇಂಡಿಯನ್)**

ಆಕರ್ಷಕ ವೇತನ ಹಾಗೂ ಉಚಿತ ವಸತಿ ನೀಡಲಾಗುವುದು.
ಆಸಕ್ತರು ಕೂಡಲೇ ಸಂದರ್ಶನಕ್ಕಾಗಿ ಸಂಪರ್ಕಿಸಿ :

**ಮೊ : 90367 23877**


EXECUTION Petition. No168/2019

**IN THE COURT OF THE PRL ADDITIONAL CIVIL JUDGE DAVANAGERE AT DAVANAGERE.**

| Between: Decree Holder | | Judgement Debtors |
|---|---|---|
| Smt/- V.Veena w/o Krishna Prasad<br># 3371/8/27 of vinayaka nagar<br>1st Main opp. Indian Petrol Bunk, near Mahalaxmi Garage, P.B. Road Near, Pooja hotel, Davanagere | V/s | 1. H. Rangappa s/o Hanumanthappa<br>2. Jayamma w/o Hanumanthappa<br>3. Venktesh s/o Hanumanthappa<br>R/o No. 13261 1st cross, S.P.S. Nagar, Davanagere-6 |

To: 3) JDRI
1 H. Rangappa s/o Hanumanthappa
R/o No. 13261 1st Cross, S.P.S. Nagar, Davanagere-6

**Cause 4) Notice To JDR 5) No.1**
**By Paper Publication under order V Rule 20 of CPC**

Whereas the above petitioner has been filed Execution Petition No. 168/2019 you are necessary and essential party you are hereby notified appear personally before this Hon'ble Addl. Civil judge Davanagere on dated 01.03.2021 at 11 A.M.

Take Notice that in case of default of your appearance on the day mentioned Above the execution petition will be heard and determined in your absence by keeping you as Ex-parte No objections.

Given under the hand and seal of this court on dated 04.02.2021.

**K.R. Prasadiyavar Advocate**
Mobile : 94480 85581
Pettioner Advocate

By the Order of the Court
4.01.2021
**Chief ministreiral officer**
**Prl. Civil Judge Court Davanagere**

**ತಾಲ್ಲೂಕು ಪಂಚಾಯತ್ ಕಾರ್ಯಾಲಯ ಹರಿಹರ**
**ಹರಪನಹಳ್ಳಿ ರಸ್ತೆ, ಹರಿಹರ – 577602**
ದೂರವಾಣಿ: 08192–242264 ಫ್ಯಾಕ್ಸ್: 08192–241518
ಇ–ಮೇಲ್: eo_tp_har@yahoo.com

**ಟೆಂಡರ್ ಪ್ರಕಟಣೆ**

**ಸಂ.ತಾಪಂಹ:ಅನಿರ್ಬಂಧಿತಅನುದಾನ:ಟೆಂಡರ್: : 2020–21 ದಿನಾಂಕ : 29.01.2021**

ಹರಿಹರ ತಾಲ್ಲೂಕು ಪಂಚಾಯತ್ 15 ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿರುವ ವಿಕಲಚೇತನರಿಗೆ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಲು 2020–21ನೇ ಸಾಲಿನ ಅನಿರ್ಬಂಧಿತ ಅನುದಾನ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ **ರೂ .2.50 ಲಕ್ಷಗಳ** ಅನುದಾನವನ್ನು ಕಾಯ್ದಿರಿಸಿದ್ದು, ಈ ಮೊತ್ತಕ್ಕೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇಚ್ಛೆಯುಳ್ಳ ಪೂರೈಕೆದಾರರು ಈ ಕೆಳಕಂಡ ವಿವರ ಮತ್ತು ಷರತ್ತುಗಳಂತೆ ಸೀಲ್ ಮಾಡಿದ ದ್ವಿ–ಲಕೋಟೆಯಲ್ಲಿ ತಮ್ಮ ಟೆಂಡರ್ ದರಗಳನ್ನು (ಎಲ್ಲಾ ತೆರಿಗೆ ಸೇರಿದ) ಸಲ್ಲಿಸಬಹುದು.

ಟೆಂಡರ್ ಆಹ್ವಾನಿಸುವ ಅಧಿಕಾರಿ ಹೆಸರು: **ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಹರಿಹರ.** ಸಂಗ್ರಹಣೆ ವಿವರ: **ಹರಿಹರ ತಾಲ್ಲೂಕು ಪಂಚಾಯತ್ 15 ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿರುವ ವಿಕಲಚೇತನರಿಗೆ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡುವುದು.** ಸಾಮಗ್ರಿಗಳ ವಿವರ : **ಹೊಲಿಗೆಯಂತ್ರ** ಟೆಂಡರ್ ಮೊತ್ತ : **2.50ಲಕ್ಷ** ಇ.ಎಂ.ಡಿ. ಮೊತ್ತ : **ರೂ. 6250.** ಪ್ರತಿ ಖಾಲಿ ಟೆಂಡರ್ ನಮೂನೆಯನ್ನು ಪಡೆಯಲು ಅರ್ಜಿ ಶುಲ್ಕ : **ರೂ .500/–.** ಪ್ರತಿ ಖಾಲಿ ಟೆಂಡರ್ ನಮೂನೆಗಳನ್ನು ವಿತರಿಸುವ ಸ್ಥಳ ಮತ್ತು ದಿನಾಂಕ : **ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಹರಿಹರ ದಿನಾಂಕ : 29.01.2021 ರಿಂದ 26.02.2021ರ ಸಂಜೆ 5.00ರೊಳಗೆ.** ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಸ್ಥಳ ಮತ್ತು ದಿನಾಂಕ : **ತಾಲ್ಲೂಕು ಪಂಚಾಯತ್, ಹರಿಹರ ದಿನಾಂಕ : 01.03.2021 ಸಂಜೆ 4.00 ಗಂಟೆಯೊಳಗಾಗಿ.** ಟೆಂಡರ್ ತೆರೆಯುವ ದಿನಾಂಕ, ಸ್ಥಳ ಮತ್ತು ಸಮಯ : **ತಾಲ್ಲೂಕು ಪಂಚಾಯತ್, ಹರಿಹರ ದಿನಾಂಕ : 01.03.2021 ಸಂಜೆ 5.00 ಗಂಟೆಗೆ.**

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯತ್, ಹರಿಹರ.

ವಾ.ಸಾ.ಸಂ.ಇ./ದಾ/ನಂ.636/ಝೇಂಕಾರ್/2020–21

# ಯೋಗ ಪಟು ಪರಶುರಾಮ್‌ಗೆ ಪ್ರಶಸ್ತಿ



ದಾವಣಗೆರೆ, ಫೆ.4- ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನದ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಕಳೆದ ವಾರ ನಡೆದ ಸಮಾರಂಭದಲ್ಲಿ ನಗರದ ಅಂತರರಾಷ್ಟ್ರೀಯ ಯೋಗ ಸಾಧಕ ಎನ್.ಪರಶುರಾಮ್ ಅವರಿಗೆ 'ವಿಶ್ವೇಶ್ವರಯ್ಯ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಟಿ.ತಿಮ್ಮೇಗೌಡ, ಮಾಜಿ ಸಚಿವ ಅಮರೇಗೌಡ ಬಯ್ಯಾಪುರ, ಚಲನಚಿತ್ರ ಗೀತೆ ರಚನೆಗಾರ ಪದ್ಮಶ್ರೀ ಡಾ. ದೊಡ್ಡರಂಗೇಗೌಡರು, ಹಿರಿಯ ಚಲನಚಿತ್ರ ಕಲಾವಿದ ಗಣೇಶ್ ರಾವ್ ಕೇಸರ್‌ಕರ್, ಡಾ. ಶೇಖರಗೌಡ ಮಾಲಿ ಪಾಟೀಲ್, ಡಾ. ಚಿಕ್ಕಹೆಜ್ಜಾಜಿ ಮಹಾದೇವ್, ಪಂಕಜ ರವಿಶಂಕರ್, ಕಾಂತರಾಜಪುರ ಸುರೇಶ್, ಹಿರಿಯ ಚಿತ್ರ ನಟಿ ಗಿರಿಜಾ ಲೋಕೇಶ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಪರಶುರಾಮ್ ಅವರನ್ನು ಎಸ್‌ಎಎಸ್‌ಎಸ್ ಯೋಗ ಫೆಡರೇಶನ್ ಅಧ್ಯಕ್ಷ ರುದ್ರಣ್ಣ, ಉಪಾಧ್ಯಕ್ಷ ಎಂ.ಎನ್.ಗೋಪಾಲರಾವ್, ಖಜಾಂಚಿ ಎಸ್. ರಾಜಶೇಖರ್, ನಿರ್ದೇಶಕರಾದ ಅಜಯ್, ಜೆ.ಎಸ್. ವೀರೇಶ್, ಎಂ.ವೈ. ಸತೀಶ್, ರಾಘವೇಂದ್ರ ಎನ್.ಚವ್ಹಾಣ್, ಜಿ.ನಾಗರಾಜ್, ಸಾವಿತ್ರಮ್ಮ ಮತ್ತಿತರರು ಅಭಿನಂದಿಸಿದ್ದಾರೆ.

# ಚಳ್ಳಕೆರೆ : ಪಲ್ಸ್ ಪೋಲಿಯೋಗೆ ಶಾಸಕ ಟಿ. ರಘುಮೂರ್ತಿ ಚಾಲನೆ



ಚಳ್ಳಕೆರೆ, ಫೆ.4- ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಮುಂಭಾಗದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಶಾಸಕ ಟಿ. ರಘುಮೂರ್ತಿ ಚಾಲನೆ ನೀಡಿದರು. ಡಿಎಚ್‌ಓ. ಪ್ರೇಮಸುಧ ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಸಿ.ಬಿ. ಜಯಲಕ್ಷ್ಮಿ, ಉಪಾಧ್ಯಕ್ಷೆ ಜೈತುನ್‌ಬೀ, ಸ್ಥಾಯಿ ಸಮಿತಿ ಅಧ್ಯಕ್ಷ ರಮೇಶ್, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ತಿಪ್ಪೇಸ್ವಾಮಿ, ತಾಲ್ಲೂಕು ಪಂಚಾಯ್ತಿ ಸ್ಥಾಯಿ ಸಮಿತಿ ಅಧ್ಯಕ್ಷ ಸಮರ್ಥರಾಯ್, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ವೆಂಕಟೇಶ್, ಆರೋಗ್ಯ ಅಧಿಕಾರಿ ತಿಪ್ಪೇಸ್ವಾಮಿ, ಪ್ರಸನ್ನಕುಮಾರ್, ಗೀತಾಬಾಯಿ ಆರೋಗ್ಯ ಮತ್ತಿತರರು ಹಾಜರಿದ್ದರು.

# 'ಗೃಹ ಭಾಗ್ಯ' ಹಕ್ಕುಪತ್ರಕ್ಕೆ ಪೌರ ಕಾರ್ಮಿಕರ ಆಗ್ರಹ



ದಾವಣಗೆರೆ, ಫೆ.4- ಗೃಹ ಭಾಗ್ಯ ಯೋಜನೆಯಡಿ ಪೌರ ಕಾರ್ಮಿಕರಿಗೆ ಹಕ್ಕುಪತ್ರ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಮಹಾ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ಜಿಲ್ಲಾ ಶಾಖೆ ನೇತೃತ್ವದಲ್ಲಿ ಪೌರ ಕಾರ್ಮಿಕರು ನಗರ ಪಾಲಿಕೆ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಪೌರ ಕಾರ್ಮಿಕರು ಗೃಹ ಭಾಗ್ಯದಡಿ ಮನೆಗಳ ಹಂಚಿಕೆ ಪತ್ರ ಅಥವಾ ಹಕ್ಕುಪತ್ರಗಳನ್ನು ತಕ್ಷಣ ಬಿಡುಗಡೆ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಸನ್ನಕುಮಾರ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಸಂಘದ ನೂತನ ಕಾರ್ಯಾಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಪೌರ ಕಾರ್ಮಿಕರಿಗೆ ಗೃಹಭಾಗ್ಯದ ಹಕ್ಕುಪತ್ರವನ್ನು ತಕ್ಷಣ ಹಂಚಿಕೆ ಮಾಡಬೇಕು. 270 ಜನರಲ್ಲಿ 34 ಪೌರ ಕಾರ್ಮಿಕರನ್ನು ಮಾತ್ರ ಖಾಯಂಗೊಳಿಸಿ, ಉಳಿದ 236 ಜನರನ್ನು ನೇರ ನೇಮಕಾತಿ ಪೌರ ಕಾರ್ಮಿಕರಾಗಿ ಏಕಕಾಲದಲ್ಲಿ ಖಾಯಂಗೊಳಿಸಬೇಕು. ಆರು ತಿಂಗಳ ಸಂಬಳ ಇಲ್ಲದೇ ಕೆಲಸ ಮಾಡಿದ ಕೆಲಸಗಾರರನ್ನು ತಕ್ಷಣವೇ ಕೆಲಸಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು. ನೇರ ನೇಮಕಾತಿ ಪೌರ ಕಾರ್ಮಿಕರಿಗೆ ತಕ್ಷಣವೇ ಪಾಲಿಕೆಯಿಂದ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಒತ್ತಾಯಿಸಿದರು.

ಸಂಘದ ರಾಜ್ಯ ಉಪಾಧ್ಯಕ್ಷ ಎಲ್.ಎಂ. ಹನುಮಂತಪ್ಪ ಮಾತನಾಡಿ, ಹಿಂದೆ 89 ಜನರಿಂದ 6 ತಿಂಗಳು ಕೆಲಸ ಮಾಡಿಸಿಕೊಂಡು ಸಂಬಳವನ್ನೇ ಕೊಡದೇ ನಿಲ್ಲಿಸಲಾಗಿದೆ. ತಕ್ಷಣವೇ ಮಾನವೀಯ ದೃಷ್ಟಿಯಿಂದ ವೇತನ ನೀಡಿ, ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕು. ಇನ್ನೂ ಹೆಚ್ಚು ಪೌರ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕು. ಶೀಘ್ರವೇ ನಮ್ಮ ಬೇಡಿಕೆ ಈಡೇರಿಸದಿದ್ದರೆ ತೀವ್ರ ಸ್ವರೂಪದ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಘದ ಮುಖಂಡರಾದ ಎನ್. ನೀಲಗಿರಿಯಪ್ಪ, ಎಲ್.ಡಿ.ಗೋಣೆಪ್ಪ, ಎಲ್.ಎಚ್.ಸಾಗರ್, ಬಿ.ಲೋಹಿತ್, ಎಂ.ಓಮೇಶ, ಬಿ.ಪರಶುರಾಮ, ಎಚ್.ರವಿವರ್ಧನ್, ಶಿವಕುಮಾರ, ಮೂರ್ತಿ, ಎನ್.ಶಿವರಾಜ, ವೈ.ಪರಶುರಾಮ, ರೇವಣಪ್ಪ, ಎಚ್.ವಸಂತ, ಎಂ. ನಾಗರಾಜ, ಹೇಮಲತಾ, ಮುತ್ತೂರಮ್ಮ, ಹೊನ್ನಮ್ಮ, ಸಾಕಮ್ಮ, ಆರ್. ಶೋಭಾ ಸೇರಿದಂತೆ ಇತರರು ಭಾಗವಹಿಸಿದ್ದರು.

# ಬ್ರೈಲ್ ಕಿಟ್ ವಿತರಿಸಲು ಅಂಧ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಫೆ.4- ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್‌ಗಳನ್ನು ವಿತರಿಸುವ ಯೋಜನೆಯಡಿ ಎಸ್.ಎಸ್.ಎಲ್.ಸಿ ಹಾಗೂ ನಂತರದ ವಿದ್ಯಾಭ್ಯಾಸ ಮಾಡುವ ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್‌ಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 15 ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ವಿಕಲಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರದ ದೂರವಾಣಿ ಸಂಖ್ಯೆ 08192-2639639 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಜಿ.ಎಸ್.ಶಶಿಧರ್ ತಿಳಿಸಿದ್ದಾರೆ.

# ಟ್ರ್ಯಾಕ್ಟರ್ ಪರೇಡ್ ನಲ್ಲಿ ಮೃತಪಟ್ಟ ವ್ಯಕ್ತಿಯ ಮನೆಗೆ ಪ್ರಿಯಾಂಕಾ ಭೇಟಿ



ರಾಂಪುರ, ಫೆ. 4 – ಕಳೆದ ಜನವರಿ 26 ರಂದು ದೆಹಲಿಯಲ್ಲಿ ನಡೆದ ಪರೇಡ್‌ನಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಕುಟುಂಬದವರನ್ನು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಭೇಟಿ ಮಾಡಿದ್ದಾರೆ. ರೈತರನ್ನು ಉಗ್ರರೆಂದು ಬಿಂಬಿಸುವುದು ಹಾಗೂ ಪ್ರತಿಭಟನೆಯನ್ನು ರಾಜಕೀಯ ಸಂಚೆಂದು ಹೇಳುವುದನ್ನು ಬಿಟ್ಟು ನೂತನ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

27 ವರ್ಷದ ನವರೀತ್ ಸಿಂಗ್ ಪರೇಡ್‌ನಲ್ಲಿ ಮೃತಪಟ್ಟಿದ್ದರು. ಅವರ ಕುಟುಂಬದವರನ್ನು ಉತ್ತರ ಪ್ರದೇಶದ ರಾಮಪುರ ಜಿಲ್ಲೆಯ ದಿಬ್ದಿಬಾ ಹಳ್ಳಿಯಲ್ಲಿ ಭೇಟಿ ಮಾಡಿದ ಪ್ರಿಯಾಂಕಾ, ಕುಟುಂಬದವರು ಆಯೋಜಿಸಿದ್ದ ಪ್ರಾರ್ಥನಾ ಸಭೆಯಲ್ಲೂ ಭಾಗಿಯಾದರು.

ರೈತರ ಪ್ರತಿಭಟನೆ ಸಮಯದಲ್ಲಿ ಟ್ರ್ಯಾಕ್ಟರ್ ಉರುಳಿ ಸಿಂಗ್ ಸಾವನ್ನಪ್ಪಿದ್ದರು. ಆಸ್ಟ್ರೇಲಿಯಾದಲ್ಲಿದ್ದ ಸಿಂಗ್, ಮದುವೆ ಸಂಭ್ರಮದಲ್ಲಿ ಪಾಲ್ಗೊಳ್ಳಲು ಭಾರತಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಟ್ರ್ಯಾಕ್ಟರ್ ಪರೇಡ್‌ಗೆ ತೆರಳಿದ್ದರು.

ಕುಟುಂಬದವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಪ್ರಿಯಾಂಕಾ ಗಾಂಧಿ, ಇದು ರಾಜಕೀಯದ ಮಾತನಾಡುವ ಸಮಯವಲ್ಲ. ಆದರೆ, ನಾವು ದೌರ್ಜನ್ಯ ಸಹಿಸುವುದಿಲ್ಲ. ಇದು ರಾಜಕೀಯ ಪ್ರತಿಭಟನೆಯಲ್ಲ, ರೈತರ ನಿಜವಾದ ಪ್ರತಿಭಟನೆ ಎಂದು ಹೇಳಿದರು.

# ರಾಣೇಬೆನ್ನೂರು : ಲಯನ್ಸ್ ಕ್ಲಬ್ ಸೇವಾ ಭಾವನೆಯಿಂದ ಕಾರ್ಯನಿರ್ವಹಿಸುತ್ತಿದೆ




ಜಿಲ್ಲಾ ರಾಜ್ಯಪಾಲ ಡಾ. ಗಿರೀಶ್ ಕುಚಿನಾಡ

ರಾಣೇಬೆನ್ನೂರು, ಫೆ.4- ಕಳೆದ ನಾಲ್ಕು ದಶಕಗಳಿಂದ ರಾಣೇಬೆನ್ನೂರು ಲಯನ್ಸ್ ಕ್ಲಬ್, ಶಿಕ್ಷಣ ಕ್ಷೇತ್ರವೂ ಸೇರಿದಂತೆ ಸೇವಾ ಭಾವನೆಯೊಂದಿಗೆ ಉತ್ತಮ ಕಾರ್ಯ ಮಾಡುತ್ತಿದೆ ಎಂದು ಜಿಲ್ಲಾ ರಾಜ್ಯಪಾಲ ಡಾ. ಗಿರೀಶ್ ಕುಚಿನಾಡ ಹೇಳಿದರು.

ಅವರು ನಿನ್ನೆ ಲಯನ್ ಶಾಲೆಯಲ್ಲಿ ರಾಜ್ಯಪಾಲರ ಭೇಟಿ ಹಿನ್ನೆಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಂಸ್ಥೆಯ ಸದಸ್ಯರು ತಮಗೆ ಸಿಗುವ ಅಧ್ಯಕ್ಷ ಅಥವಾ ಇನ್ನಾವುದೇ ಸ್ಥಾನವನ್ನು ಅಧಿಕಾರವೆಂದು ಪರಿಗಣಿಸದೇ, ಆ ಅವಧಿಯಲ್ಲಿ ಜನಸೇವೆಯಲ್ಲಿ ತೊಡಗಿಕೊಳ್ಳುತ್ತಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಂ.ಎಸ್. ಅರಕೇರಿ, ಟಿ.ಸಿ. ಪಾಟೀಲ, ಬಸವರಾಜ ಬಡಿಗೇರ, ಎಂ. ಬಸವರಾಜಯ್ಯ, ಮಾಲತೇಶ ಚಳಗೇರಿ, ಆರ್. ವಿ.ಸುರಗೊಂಡ, ಶಿವಪ್ಪ ಗುರಿಕಾರ, ಬಸವರಾಜ ಪಾಟೀಲ ಇನ್ನಿತರರು ಭಾಗವಹಿಸಿದ್ದರು.

ಗೋಪಾಲದಾಸರು ಆರಾಧನೆ ಪ್ರಯುಕ್ತ

## ಗೋಪಾಲದಾಸರಿಗೆ ನಮನ

ಗೋಪಾಲದಾಸರೆ ನಿಮಗೆ ವಂದಿಪೆ
ಅಪಾರಶಕ್ತರೆ ನಿಮ್ಮ ಪಾದಕ್ವಂದಿಪೆ
ಅಪರೋಕ್ಷ ಜ್ಞಾನಿಗಳ ನೆನೆದು ಹರ್ಷಿಪೆ
ಕಾಪಾಡಿ ಎಂದು ಸೆರಗೊಡ್ಡಿ ಪ್ರಾರ್ಥಿಪೆ

ಕಡುಬಡತನದಲ್ಲೂ ಸಾಧನೆಯ ಮಾಡುತ
ಬಿಡದೆ ಗಾಯತ್ರಿ ಮಂತ್ರ ಸಿದ್ಧಿಪಡೆಯುತ
ಗುಡಿಯಲ್ಲಿ ವಾಸಿಸಿ ಭವಿಷ್ಯ ಹೇಳುತ
ಎಡೆಬಿಡದೆ ಭಕ್ತಿಯಲಿ ಹರಿಯ ಮೆಚ್ಚಿಸುತ

ವಿಜಯದಾಸರಿಂದ ಅಂಕಿತವ ಪಡೆಯುತ
ನಿಜ ಭಕ್ತಿಯಲ್ಲಿ ಗೋಪಾಲವಿಠಲ ಎನ್ನುತ
ನಿಜ ಸುಜ್ಞಾನವ ಪದಗಳಲಿ ತುಂಬುತ
ಭಜನೆ ಕೀರ್ತನೆಯಲ್ಲಿ ಹರಿಯನ್ನು ಸ್ಮರಿಸುತ

ಗುರುವಾಜ್ಞೆಯಂತೆ ಆಯುರ್ದಾನ ನೀಡುತ
ತರುಣ ಆಚಾರ್ಯನ ಉದರಶೂಲೆ ಕಳೆಯುತ
ಪರಮ ಜಗನ್ನಾಥದಾಸರುದ್ಧಾರ ಮಾಡುತ
ನಿರುಪಮ ಆನಂದದಲಿ ತೇಲಾಡುತ


ಸುಳಾದಿಯಲ್ಲಿ ತುಂಬಿಹರು ಭಕ್ತಿಸಾರವ
ಸುಳಿವು ಬಿಂಬೋಪಾಸನೆಗೆ ಯೋಗ್ಯಮಾರ್ಗವ
ಹಲವಾರು ಕೀರ್ತನೆಯಲಿ ಭಕ್ತಿ ಶಿಖರವ
ನಲಿಯುತ ಕಟ್ಟಿಹರು ಭಾಗಣ್ಣ ಸೌಧವ

ಗಣಪತಿಯ ಅಂಶದಿಂದ ಬಂದ ಗುರುಗಳೆ
ಬಣ್ಣಿಸಲಸದಳವು ನಿಮ್ಮ ದಾಸಶ್ರೇಷ್ಠರೆ
ಕಣ್ಣಿಗೆ ಸಿರಿಹರಿಯ ತೋರಿ ಸಚ್ಚಾರಿತ್ರರೆ
ಮಣಿಯುವೆ ನಿಮ್ಮಡಿಗಳಿಗೆ ಭಾಗ್ಯದಾತರೆ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಗೋಪಾಲದಾಸರ ಆರಾಧನೆ

ದಾಸಪಂಥದ ಅಗ್ರಗಣ್ಯರು
ಮೊಸರುಕಲ್ಲು ಶ್ರೀ ಗೋಪಾಲದಾಸರು
ಭಾಗಣ್ಣ ಎಂದು ನಾಮಕರಣ
ಮುರಾರಿರಾಯರು ವೆಂಕಮ್ಮರ ಸುತ



ಬಾಲ್ಯದಲ್ಲಿ ಕಡುಬಡತನ
ಸಣ್ಣವಯಸ್ಸಿನಲ್ಲೇ ತಂದೆಯ ಮರಣ
ಭಿಕ್ಷೆ ಬೇಡಿ ಜೀವನ
ಊಟಕ್ಕೂ ಗತಿ ಇಲ್ಲದ ಯಾನ

2 ವರ್ಷ ಗಾಯತ್ರಿದೇವಿಯ ಸಾಕಾರ
ಒಲಿದಳು ದೇವಿ ಇವರಿಗೆ
ಒಲಿಯಿತು ಜ್ಯೋತಿಷ್ಯ ಹೇಳಿಕೆ
ನುಡಿದದ್ದೆಲ್ಲ ಸತ್ಯವಾಯ್ತು ಜನರಿಗೆ

ವಿಘ್ನೇಶ್ವರ ನ ಅಂಶಸಂಭೂತರು
ಆದಿಶೇಶನ ಕಾರುಣ್ಯ ಪಾತ್ರರು
ವೇದವ್ಯಾಸ ಭಾರತ ಬರೆದ ಲಂಭೋದರ
ಭಾಗಣ್ಣ ಸಮಾಜ ಉದ್ದರಿಸಿದ ಹರಿಕಾರ

ಶ್ರೀನಿವಾಸನ ಜೊತೆ ಕುಣಿಯುತ್ತಿದ್ದರು
ಸಹಸ್ರಾರು ಕೀರ್ತನೆ ರಚಿಸಿದರು
ಪಾಂಡುರಂಗನ ಜೊತೆ ಸರಸ
ಒಡನಾಡಿದರು ದೈವ ಸಹವಾಸ

ನೀಡಿದರು 40 ವರ್ಷ ಆಯುಸ್ಸು
ಪಡೆದ ಶ್ರೀನಿವಾಸಚಾರ್ಯ ಮಹತ್ತು
ಮಹಾಮಹಿಮಾ ಗೋಪಾಲದಾಸರು
ಗೋಪಾಲವಿಠಲಾಂಕಿತರು

ಉಡುಪಿಯಲ್ಲಿ ಬಾಲಕೃಷ್ಣನಾ ಒಡನಾಟ
ಎಲ್ಲಾ ದೇವರು ಇವರ ವಶ
ಸಾವಿರಾರು ಸುಳಾದಿ ರಚನೆ
ಪವಾಡಪುರುಷ ಹಲವಾರು ಸಾಧನೆ

- ಕೋಮಲ ವಿ ಕುಮಾರ್

## ದಿನದ ಚುಟುಕು

ಅನ್ನುವವರು ಅನ್ನಲಿ ಬಿಡಿ
ಅದನ್ನಲ್ಲಿಯೇ ಮರೆತು ಬಿಡಿ
ಅಂದದ್ದೆಲ್ಲಾ ಆಶೀರ್ವಾದ ಎನ್ನಿರಿ
ನಿಮ್ಮ ಕಾಯಕ ಬಿಡದೆ ಮಾಡಿರಿ !

- ವೀಕೆಎಂ.

# ಸ್ಪರ್ಧಾತ್ಮಕ ಪರೀಕ್ಷೆ : ತರಬೇತಿ

ದಾವಣಗೆರೆ, ಫೆ.4- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಮತ್ತು ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಹುದ್ದೆ ಭರ್ತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಪರೀಕ್ಷಾರ್ಥಿಗಳಿಗೆ ಇದೇ ದಿನಾಂಕ 8 ರಿಂದ 16 ರವರೆಗೆ ಉಚಿತ ಪರೀಕ್ಷಾ ಪೂರ್ವ ತರಬೇತಿಯನ್ನು ಆಯೋಜಿಸಲಾಗಿದೆ.

ತರಬೇತಿಗೆ ಹಾಜರಾಗಲಿಚ್ಚಿಸುವ ಅಭ್ಯರ್ಥಿಗಳು ದಿನಾಂಕ 8 ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತರಬೇತಿಯನ್ನು ಆಯೋಜಿಸಲಾಗಿದೆ. ವಿವರಕ್ಕೆ ದೂರವಾಣಿ ಸಂಖ್ಯೆ 08192-259446 ರಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಕೆ.ಎನ್. ಗಿರೀಶ್ ತಿಳಿಸಿದ್ದಾರೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಹರಿಹರ : ದಾಸರ ಪದಗಳ ಸ್ಪರ್ಧೆ

ಹರಿಹರ, ಫೆ.4- ಪುರಂದರ ದಾಸರ ಆರಾಧನೆ ಪ್ರಯುಕ್ತ ಇದೇ ದಿನಾಂಕ 7 ರಂದು ದಾಸರ ಪದಗಳ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಶ್ರೀ ಚೈತನ್ಯ ಸಂಗೀತ ಮತ್ತು ನೃತ್ಯ ಕಲಾ ಕೇಂದ್ರ, (9663242243, 8073181096) ವನ್ನು ಸಂಪರ್ಕಿಸುವುದು.

ರಕ್ತದಾನ, ಶ್ರೇಷ್ಠದಾನ

ಜಮೀನು ಮಾರಾಟಕ್ಕಿದೆ
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

ರಾಣೇಬೆನ್ನೂರಿನ
ಚೋಳ ಮರುಡೇಶ್ವರ ನಗರದಲ್ಲಿ
40x60 East, 40x50 East South Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
9916612110, 9341014130

ಮನೆಗಳು ಮಾರಾಟಕ್ಕಿವೆ
30x40 ಪೂರ್ವ, 40x60 ದಕ್ಷಿಣ ಮನೆ ನಿಜಲಿಂಗಪ್ಪ ಬಡಾವಣೆ, ಚಿಗಟೇರಿ ಬಡಾವಣೆ 30x40 ಪೂರ್ವ, ಮೇಲೆ, ಕೆಳಗೆ ಬಸವೇಶ್ವರ ಬಡಾವಣೆ 30x40 ಪೂರ್ವ ಕೆಳಗೆ ಮತ್ತು ಮೇಲೆ ಮನೆ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
95911 60520 -ಸುರೇಶ್
99457 02495- ಐಗೂರು ವಿಜಯ್ ಕುಮಾರ್

ಸೈಟುಗಳು ಮಾರಾಟಕ್ಕಿವೆ
ಹೈಟೆಕ್ ಲೇಔಟ್‌ನಲ್ಲಿ 30x50 ಪಶ್ಚಿಮ
ಮನೆ ಮಾರಾಟಕ್ಕಿದೆ
ಹೈಟೆಕ್ ಬಡಾವಣೆಯಲ್ಲಿ 30x50 ಹೊಸ ಮನೆ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

ಸೈಟ್‌ಗಳು ಮಾರಾಟಕ್ಕಿವೆ
ಕರ್ನಾಟಕ ಗೃಹ ಮಂಡಳಿ KHB 30x50 ದಕ್ಷಿಣ (120 ಅಡಿ ರಸ್ತೆಗೆ ಹತ್ತಿರ), ವಿದ್ಯಾನಗರ ಪಕ್ಕದ ರಂಗನಾಥ ಬಡಾವಣೆಯಲ್ಲಿ 25x30 , 25x30 ಅಕ್ಕ-ಪಕ್ಕ
ಮಂಜುನಾಥ್ ಏಜೆಂಟ್
98444 91792

ಮನೆಗಳು ಬಾಡಿಗೆಗೆ ದೊರೆಯುತ್ತವೆ
1) ಮೂರು ಬೆಡ್‌ರೂಂ ಮನೆ ಗ್ರೌಂಡ್ ಫ್ಲೋರ್, ನೂತನ ಕಾಲೇಜ್ ಹತ್ತಿರ
2) ಮೂರು ಬೆಡ್‌ರೂಂ, ಇಂಡಿಪೆಂಡೆಂಟ್ ಹೌಸ್, ಕಾರ್ನರ್ ಅಥಣಿ ಕಾಲೇಜ್ ಹತ್ತಿರ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166, 12110, 93410 14130

ಸೈಟ್‌ಗಳು ಮಾರಾಟಕ್ಕಿವೆ
ಶಿವ ಪಾರ್ವತಿ ಬಡಾವಣೆ 30x40, 38x40, 30x50 40x60 ಪೂರ್ವ, 30x40 38x40 ಪಶ್ಚಿಮ, ಬನಶಂಕರಿ ಬಡಾವಣೆ 30x55 ಪಶ್ಚಿಮ, ಶಿವಕುಮಾರಸ್ವಾಮಿ ಬಡಾವಣೆ 40x60, ಎಂಸಿಸಿ 'ಎ' ಬ್ಲಾಕ್ 35x50 ಪೂರ್ವ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
95911 60520 -ಸುರೇಶ್
99457 02495- ಐಗೂರು ವಿಜಯ್ ಕುಮಾರ್

ಸೈಟುಗಳು ಮಾರಾಟಕ್ಕಿವೆ
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ, ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

ಮನೆ ಬಾಡಿಗೆಗೆ ಇದೆ
ದಾವಣಗೆರೆ ನಗರದ ತರಳಬಾಳು ಬಡಾವಣೆಯ 15ನೇ ಕ್ರಾಸ್‌ನಲ್ಲಿರುವ ಗಣೇಶ ನಿಲಯದಲ್ಲಿ ಎರಡನೇ ಮಹಡಿಯಲ್ಲಿ 1 ಸಿಂಗಲ್ ಅಟ್ಯಾಚ್ ರೂಂ ಇರುತ್ತದೆ. ವಿಚಾರಿಸಿ
94816 72078

ಬೇಕಾಗಿದ್ದಾರೆ
ವೇಟರ್, ಕ್ಯಾಪ್ಟನ್, ಕ್ಲೀನಿಂಗ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
ಹೋಟೆಲ್ ಫುಡ್ಡೀಸ್
ಚರ್ಚ್ ರಸ್ತೆ, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ.
98861 56688, 70195 85916

ಮನೆ ಮಾರಾಟಕ್ಕಿದೆ
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್‌ರೂಂ ಮನೆ. ಇಂಡಿಪೆಂಡೆಂಟ್ ಹೌಸ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

ಸೈಟು ಮಾರಾಟಕ್ಕೆ
ಬ್ರೋಕರ್ ಗೆ ಅವಕಾಶವಿಲ್ಲ
ಜೆ.ಹೆಚ್. ಪಟೇಲ್ ಬಡಾವಣೆ ಪಕ್ಕ
30x40 ಪಶ್ಚಿಮ
ಮೊ.77600-19694

ರೂಂಗಳು ಬಾಡಿಗೆಗಿವೆ
ಅಟ್ಯಾಚ್ ಬಾತ್‌ರೂಂವುಳ್ಳ, ಸುಸಜ್ಜಿತ ರೂಂಗಳು ಬಾಡಿಗೆಗೆ ಲಭ್ಯವಿವೆ. ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ಮಾತ್ರ. ಜೀವ ಆಯುರ್ವೇದ , ಆಂಜನೇಯ ಬಡಾವಣೆ, 13ನೇ ಕ್ರಾಸ್, ದಾವಣಗೆರೆ.
97413 01391
77605 55877

ಬೇಕಾಗಿದ್ದಾರೆ
ಕೆಲಸ ಬೇಕಾ.com
ಮರ್ಚೆಂಟ್ ನೇವಿಯಲ್ಲಿ ಕೆಲಸ ಮಾಡಲು ಆಸಕ್ತ ಯುವಕ-ಯುವತಿಯರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 25 ವರ್ಷ
ಸಂಬಳ : ತಿಂಗಳಿಗೆ 1 ಲಕ್ಷದವರೆಗೆ
96869 58555, 77609 55550

ಬೇಕಾಗಿದ್ದಾರೆ
ಸೋಲಾರ್ ಉತ್ಪನ್ನಗಳ ಮಾರಾಟಕ್ಕೆ Sales Excutive ಹಾಗೂ ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನವುಳ್ಳ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ: ಶ್ರೀಧರ್
99005 47328

ನೇರ ಪರೀಕ್ಷೆಗಳು
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

ಮನೆ ಬಾಡಿಗೆಗೆ ಇದೆ
#1928/63A, ಎಸ್.ಎಸ್. ಲೇಔಟ್, ಎ ಬ್ಲಾಕ್, ಎಂ.ಬಿ.ಎ. ಕಾಲೇಜ್ ಹತ್ತಿರ, 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
70227 94155

WANTED
Sales Manager. B.A./B. Com/Diploma. Tally, Basic Computer Knowledge.
Walk-in with Resume to
Agadi Track & Trail
Murughrajendra Complex, Hadadi Road.

Vacent Site for Rent or Lease
site No 14,15,16 near shiradi sai Baba Temple opposite Siri Sai Hostel, jayanagara Badavane, Davanagere. Contact
Rajashekar - 94489 66264
Venkatesh - 82774 81291
Shivanandppa - 63615 67680

SWIGGY HIRING
DELIVERY EXECUTIVES
FULL TIME / PART TIME
4000 TO 5000 WEEKLY SALARY
99866 93009
95132 22622

2BHK ಮನೆ ಬಾಡಿಗೆಗೆ ಇದೆ
# 2651, 3ನೇ ಮೇನ್, SS ಲೇಔಟ್ 'ಬಿ' ಬ್ಲಾಕ್ ದಾವಣಗೆರೆಯಲ್ಲಿ 2 BHK , ಬೋರ್ AEH ಸೌಲಭ್ಯವಿದೆ. ಸಂಪರ್ಕಿಸಿ
97401 08058
94486 28076

ಬೇಕಾಗಿದ್ದಾರೆ
ಬೆಂಗಳೂರಿನ ಸುಪ್ರಸಿದ್ಧ ಉತ್ತರ ಕರ್ನಾಟಕದ ಹೋಟೆಲ್‌ನಲ್ಲಿ ಕೆಲಸ ಮಾಡಲು MALE & FEMALE ಅಡುಗೆ ಕೆಲಸದವರು, ಸಪ್ಲೈಯರ್ಸ್, ಊಟ, ವಸತಿಯೊಂದಿಗೆ ಉತ್ತಮ ಸಂಬಳ ಕೊಡಲಾಗುವುದು. ಸಂಪರ್ಕಿಸಿ:
73495 67221
73497 65221

ಬೇಕಾಗಿದ್ದಾರೆ
ITI ಪಾಸ್ ಅಥವಾ ಫೇಲ್ ಆದ ಅಭ್ಯರ್ಥಿಗಳು ಅಲ್ಯೂಮಿನಿಯಂ ಫ್ಯಾಬ್ರಿಕೇಷನ್ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ದಾವಣಗೆರೆ
ಸಂಪರ್ಕಿಸಿ:
79756 60040

REQUIRED
DUTY DOCTORS (MBBS/BAMS), NURSE, OT TECHNICIAN FEMALE RECEPTIONIST DRIVERS, AYAS/WARD BOY
contact: drshashi.in@gmail.com
9916931407

ಹಾಲ್ ಬಾಡಿಗೆಗಿದೆ
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

ಮನೆಗಳು ಬಾಡಿಗೆಗೆ ಇರುತ್ತವೆ
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

ಬೇಕಾಗಿದ್ದಾರೆ
ಬಾರ್ ಮತ್ತು ರೆಸ್ಟೋರೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ.
99455 97132
80889 56656

ಅಂಗಡಿ ಲೀಜ್/ಬಾಡಿಗೆಗೆ
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ ವಿಚಾರಿಸಿ
89041 29928

ಬೇಕಾಗಿದ್ದಾರೆ
ಪೇಪರ್ ಫ್ಯಾಕ್ಟರಿಯಲ್ಲಿ ಆಪರೇಟರ್ ಕೆಲಸಕ್ಕೆ SSLC/ITI ಆಗಿರುವ ಹುಡುಗರು ಬೇಕಾಗಿದ್ದಾರೆ. ವೇತನ: 7000 ಆಸಕ್ತರು ಸಂಪರ್ಕಿಸಿ
82964 35527

ಬೇಕಾಗಿದ್ದಾರೆ
ಬೇತೂರು ಮತ್ತು ನೆಲ್ಲೂರಿನಲ್ಲಿ ಹಾಗೂ ದಾವಣಗೆರೆ ಸುತ್ತಮುತ್ತಲು ಸೆಕ್ಯೂರಿಟಿ ಹಾಗೂ ರಿಸೆಪ್ಷನಿಸ್ಟ್, ರೂಮ್ ಬಾಯ್ಸ್ ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿರಿ :
9880648207, 7411307071

ಸೈಟು ಮಾರಾಟಕ್ಕಿದೆ
25'x40' ಅಳತೆಯ ಜಯನಗರ ಚರ್ಚ್ ಹಿಂಭಾಗ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
97416 66288

ಹಾಲ್ ಬಾಡಿಗೆಗಿದೆ
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

ಸುವರ್ಣಾವಕಾಶ
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

ಮನೆ ಬಾಡಿಗೆಗೆ ಇದೆ
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

ಸೈಟುಗಳು/ಹೊಲ ಮಾರಾಟಕ್ಕೆ
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ
30x30, 30x50, 50x75, 40x60,
ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

HIRING FOR A PRESTIGIOUS INSTITUTION
10 - SECURITY GUARDS
Rs. 10,000/-
Qualification : Min. 10th
02 - SECURITY SUPERVISORS
Rs. 15,000/-
5 Yrs. Experience, Min. 12th Std.
G M I T CAMPUS DAVANGERE
91411 58731
99722 11111

ಡಾ|| ಸೋಮಶೇಖರ್. ಎಸ್.ಎ.
Rheumatologist ಇವರು ಇಂದು 05.02.2021ರ ಶುಕ್ರವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

SARASWATHI ABACUS
Karnataka Classical Music and Tuitions
M. : 94830 60073

ಆರೋಗ್ಯವೇ ಭಾಗ್ಯ
ದಿನಾಂಕ: 5.2.2021, 6.2.2021, 7.2.2021 ರಂದು ಅಧಿಕ ತೂಕದಿಂದ ಆರೋಗ್ಯ ಸಮಸ್ಯೆಯಿಂದ ಬಳಲುತ್ತೀದ್ದಿರಾ ಹಾಗಾದರೆ ಸುಲಭವಾಗಿ ತೂಕ ಕಡಿಮೆ ಮಾಡಿಕೊಂಡು ಸಮಸ್ಯೆಯಿಂದ ಹೊರ ಬರಲು ಹೇಳಿಕೊಡಲಾಗುತ್ತದೆ. ಉಚಿತ ತಪಾಸಣೆ ಇರುತ್ತದೆ. ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ ಸಮಯ ಬೆಳಿಗ್ಗೆ 8 ರಿಂದ 12. ಹೆಚ್ಚಿನ ಮಾಹಿತಿಗಾಗಿ
70191 39546, 70192 49897

ಬೇಕಾಗಿದ್ದಾರೆ
ನ್ಯೂ ಡೆಲ್ಲಿಯಲ್ಲಿರುವ ಹೋಟೆಲ್ ಕೆಲಸಕ್ಕಾಗಿ ಎಲ್ಲಾ ತರಹದ ತಿಂಡಿ ರೆಡಿ ಮಾಡುವ ನುರಿತ ಭಟ್ಟರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
95358 06493
89703 66639

SAHYADRI PARAMEDICAL COLLEGE
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
(ಕೊನೆಯ ದಿನಾಂಕ : 10.2.2021)
90195 80600, 86601 95955

ಜಮೀನು ಮಾರಾಟಕ್ಕಿದೆ
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

ZENVO
UPS/ Battery/ Solar PCU
Easy EMI Facility avalable
City Electronic Systems
# 212/14, 3rd main Road, P.J Extn Davanagere.
98453 52371, 96865 77677

Sanjeevini Institute of Nursing & Paramedical Davanagere
GNM, DMLT, DOTT, DHI, BSCMLT, M.Sc MLT
08192-220611
97430 73102

ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

TUITIONS FOR
1st to 9th, Diploma & BE., with Notes
ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 88614 45913

ಲೋನ್ ಮಾಡಿಕೊಡಲಾಗುವುದು
ವ್ಯಾಪಾರಕ್ಕಾಗಿ, ಟೈಲರ್ ಶಾಪ್, ಚಿಕನ್ ಶಾಪ್, ಫ್ಯಾನ್ಸಿ ಸ್ಟೋರ್, ಬುಕ್ ಸ್ಟಾಲ್, ಬ್ಯೂಟಿಪಾರ್ಲರ್, ಕಿರಾಣಿ ಅಂಗಡಿ, ಹೋಟೆಲ್, ವರ್ಕ್‌ಶಾಪ್,ಬೇಕರಿ, ಜ್ಯೂಸ್ ಸ್ಟಾಲ್‌ಗಳ ಮೇಲೆ ಲೋನ್ ಮಾಡಿಕೊಡಲಾಗುವುದು. ಸಂಪರ್ಕಿಸಿ
91646 26654

ATTENTION
WORK FROM HOME PART TIME/ FULL TIME-LOW COST STARATUP BE YOUR OWN BOSS!!
Call: 79751 41486

ಬೇಕಾಗಿದ್ದಾರೆ
1) ಡೆಲಿವರಿ ಬಾಯ್ಸ್, ಸೈಕಲ್ ಹೊಂದಿರಬೇಕು.
2) ಸೇಲ್ಸ್ ಬಾಯ್ಸ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮ
1ನೇ ಫ್ಲೋರ್, ಕಾಲೇಜು ರಸ್ತೆ, ಡಾ|| ಆಲೂರು ಮಂಜುನಾಥ ಹಾಸ್ಪಿಟಲ್ ಪಕ್ಕ, ಪಿ.ಜೆ. ಬಡಾವಣೆ, ದಾವಣಗೆರೆ
9513222192, 7760157961

ವಾಸ್ತು ಮನೆ & ಶಾಪ್ ಬಾಡಿಗೆಗೆ
ಶಾಪ್ ಮತ್ತು ಪೂರ್ವ ಮುಂಬಾಗಿಲಿನ ಗ್ರೌಂಡ್ ಫ್ಲೋರ್ ಮನೆ 2/3 ಬೆಡ್‌ರೂಂ, ಡೈನಿಂಗ್ ಹಾಲ್, ನೀರಿನ ಸೌಕರ್ಯ, ಪಾರ್ಕಿಂಗ್, ಮನೆ ಬಾಡಿಗೆಗೆ ಸಮೃದ್ಧಿ ನಿಲಯ # 408, 8ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಪಿ.ಜೆ. ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ
95386 41980, 93807 97651

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
ಹಿಂದೂ ವಧು-ವರರ ಮಾಹಿತಿ ಕೇಂದ್ರ,
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

# ಕುರುಬ ಜಾಗೃತಿ ಸಮಾವೇಶಕ್ಕೆ ಜಿಲ್ಲೆಯಿಂದ 50 ಸಾವಿರ ಜನರು

ದಾವಣಗೆರೆ, ಫೆ.4- ಕುರುಬ ಜಾತಿಯನ್ನು ಎಸ್.ಟಿ. ಮೀಸಲಾತಿ ಪಟ್ಟಿಯೊಳಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕೆಂದು ಒತ್ತಾಯಿಸಿ ಇದೇ ದಿನಾಂಕ 7ರ ಭಾನುವಾರ ಬೆಂಗಳೂರಿನ ಇಂಟರ್ ನ್ಯಾಷನಲ್ ಎಕ್ಸಿಬ್ಯೂಷನ್ ಮೈದಾನದಲ್ಲಿ ಕುರುಬರ ಜಾಗೃತಿ ಸಮಾವೇಶ ನಡೆಯಲಿದೆ ಎಂದು ಸಮಾಜದ ಮುಖಂಡ ಬಿ.ಎಂ. ಸತೀಶ್ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುರುಬ ಸಮಾಜಕ್ಕಾಗಿರುವ ಅನ್ಯಾಯವನ್ನು ಸರಿಪಡಿಸುವಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಒತ್ತಾಯಿಸಿ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಜನವರಿ 15 ರಿಂದ ಕಾಗಿನೆಲೆಯಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸಿದ್ದಾರೆ. ಹಕ್ಕೊತ್ತಾಯದ ಮುಂದುವರೆದ ಭಾಗವಾಗಿ ಬೆಂಗಳೂರಿನಲ್ಲಿ ಐತಿಹಾಸಿಕ ಸಮಾವೇಶ ನಡೆಯಲಿದೆ ಎಂದು ಹೇಳಿದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಅಂದಿನ ಸಮಾವೇಶಕ್ಕೆ ಹತ್ತು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಜನ ಸೇರುವ ನಿರೀಕ್ಷೆ ಇದೆ. ದಾವಣಗೆರೆ ಜಿಲ್ಲೆಯ ಪ್ರತಿ ತಾಲ್ಲೂಕಿನಿಂದ ಏಳೆಂಟು ಸಾವಿರ ಜನ ಸೇರಿದಂತೆ ಜಿಲ್ಲೆಯಿಂದ ಸುಮಾರು 50 ಸಾವಿರ ಜನ ಬೆಂಗಳೂರಿಗೆ ತೆರಳಲು ಸಿದ್ಧರಾಗಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಹಾಲೇಕಲ್ ವೀರಣ್ಣ, ಶಿವಣ್ಣ ಮೇಷ್ಟ್ರು, ಎಸ್.ಎಸ್. ಗಿರೀಶ್, ವಿಜಯ್ ಜೋಗಪ್ಪನವರ್, ಭರಮಪ್ಪ ಪೈಲ್ವಾನ್, ಹೆಚ್.ಎನ್. ಗುರುನಾಥ್, ಪ್ರಸನ್ನ ಕುಮಾರ್, ಚಂದ್ರಶೇಖರ್, ಶಿವಮೂರ್ತಿ, ಪರಶುರಾಮ್, ಧನರಾಜ್ ಹಾಗು ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸರ್ಕಾರಿ ನೌಕರರ ಕ್ರೀಡಾಕೂಟ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ಇವರ ಸಹಯೋಗದಲ್ಲಿ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯ ಉದ್ಘಾಟನೆಯು ಇಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

# ಬಿಟ್ಟು ಹೋಗಿರುವ ಮಕ್ಕಳು - ಮಹಿಳೆಯರಿಗೆ ಲಸಿಕೆ



**ಫೆಬ್ರವರಿ ಮಾರ್ಚ್ ಮಾಹೆಗಳಲ್ಲಿ ಇಂದ್ರಧನುಷ್ ಲಸಿಕಾ ಅಭಿಯಾನ**

**- ಶ್ರೀಮತಿ ಪದ್ಮಾ ಬಸವಂತಪ್ಪ**
ಸಿಇಓ, ಜಿಲ್ಲಾ ಪಂಚಾಯತ್

ದಾವಣಗೆರೆ, ಫೆ.4 - ಸಾರ್ವತ್ರಿಕ ಲಸಿಕೆ ಕಾರ್ಯಕ್ರಮದಲ್ಲಿ ಬಿಟ್ಟು ಹೋದ ಮಕ್ಕಳು ಮತ್ತು ಗರ್ಭಿಣಿಯರನ್ನು ಗುರುತಿಸಿ ಲಸಿಕೆ ಹಾಕಿಸುವ ತೀವ್ರಗೊಂಡ ಇಂದ್ರಧನುಷ್ ಲಸಿಕಾ ಅಭಿಯಾನವನ್ನು ಫೆಬ್ರವರಿ ಮತ್ತು ಮಾರ್ಚ್ ಮಾಹೆಗಳಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಪದ್ಮಾ ಬಸವಂತಪ್ಪ ತಿಳಿಸಿದ್ದಾರೆ.

ಇಲ್ಲಿನ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಇಂದು ಏರ್ಪಡಿಸಲಾಗಿದ್ದ ತೀವ್ರಗೊಂಡ ಇಂದ್ರಧನುಷ್ ಲಸಿಕಾ ಅಭಿಯಾನ 3.0 (ಇಂಟೆನ್ಸಿಫೈಡ್ ಮಿಷನ್ 3.0) ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಾತನಾಡಿದರು.

ದಾವಣಗೆರೆ ಮತ್ತು ಹರಿಹರ ನಗರ ಪ್ರದೇಶದಲ್ಲಿ ಮುಖ್ಯವಾಗಿ ವಲಸೆ ಪ್ರದೇಶಗಳು, ಕೊಳಚೆ ಪ್ರದೇಶಗಳಲ್ಲಿ ಸಾರ್ವತ್ರಿಕ ಲಸಿಕೆಯಿಂದ ಬಿಟ್ಟು ಹೋದ 02 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿಯರನ್ನು ಗುರುತಿಸಿ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಈಗಾಗಲೇ ಕ್ರಿಯಾ ಯೋಜನೆ ಸಿದ್ದವಾಗಿದ್ದು, ಈ ಕಾರ್ಯಕ್ರಮವನ್ನು ನಿಗದಿತ ಗುರಿ ಸಾಧಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಅವರು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಮಾತನಾಡಿ, ರಾಜ್ಯದಲ್ಲಿ ಇಂಟೆನ್ಸಿಫೈಡ್ ಮಿಷನ್ 3.0 ಕಾರ್ಯಕ್ರಮದಲ್ಲಿ ರಾಜ್ಯದ 13 ಜಿಲ್ಲೆಗಳ ಪೈಕಿ ದಾವಣಗೆರೆಯೂ ಒಂದಾಗಿದೆ. ಈ ಕಾರ್ಯಕ್ರಮದಲ್ಲಿ ಲಸಿಕೆಗಳಾದ ಡಿಟಿಪಿ, ಮೀಸಲ್ಸ್, ಟಿಟಿ, ಬಿಸಿಜಿ, ರುಬೇಲ್ಲಾ ಸೇರಿದಂತೆ ಸಾರ್ವತ್ರಿಕ ಲಸಿಕೆಗಳನ್ನು ಹಾಕಿಸಿಕೊಳ್ಳುವಲ್ಲಿ ಬಿಟ್ಟುಹೋದ 2 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿಯನ್ನು ಗುರುತಿಸಿ ಈ ಲಸಿಕೆಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಈ ಲಸಿಕಾ ಕಾರ್ಯಕ್ರಮವನ್ನು ಫೆಬ್ರವರಿ ಮತ್ತು ಮಾರ್ಚ್ ಮಾಹೆಗಳ 8, 9, 10 ಮತ್ತು 12 ನೇ ದಿನಾಂಕಗಳಂದು ದಾವಣಗೆರೆ ಮತ್ತು ಹರಿಹರ ನಗರಗಳಲ್ಲಿ ಈಗಾಗಲೇ ಗುರುತಿಸಲಾದ ಸ್ಥಳಗಳಲ್ಲಿ ನಡೆಸಲಾಗುವುದು. ಕೋವಿಡ್ ಹಿನ್ನೆಲೆಯಲ್ಲಿ ದೇಶದಾದ್ಯಂತ ಲಸಿಕಾಕರಣದಲ್ಲಿ ಶೇ.26 ಇಳಿಕೆ ಕಂಡು ಬಂದಿದ್ದು, ಇದನ್ನು ಸರಿದೂಗಿಸಲು ಮತ್ತು ಲಸಿಕಾಕರಣದಲ್ಲಿ ಶೇ.90 ಗುರಿ ಸಾಧಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ದಾವಣಗೆರೆ ಮತ್ತು ಹರಿಹರ ನಗರಗಳ ವಲಸೆ ಪ್ರದೇಶ, ಕೊಳಚೆ ಪ್ರದೇಶಗಳಲ್ಲಿ ಲಸಿಕೆ ಬಿಟ್ಟುಹೋದ ಮಕ್ಕಳು ಮತ್ತು ಗರ್ಭಿಣಿಯರನ್ನು ಗುರುತಿಸಿ ಮೈಕ್ರೋ ಯೋಜನೆ ತಯಾರಿಸಿದ್ದು ಈ ಪ್ರಕಾರ ಲಸಿಕೆಗಳನ್ನು ನೀಡಲಾಗುವುದು ಎಂದವರು ತಿಳಿಸಿದರು.

ಸಾರ್ವತ್ರಿಕ ಲಸಿಕಾಕರಣದ ಕುರಿತು ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನಗರಾಭಿವೃದ್ಧಿ ಕೋಶ, ಯುವಜನ ಸಬಲೀಕರಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಮಕ್ಕಳು ಮತ್ತು ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಮೂಲಕ ಲಸಿಕಾಕರಣದ ಯಶಸ್ಸಿಗೆ ಸಹಕರಿಸಬೇಕೆಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಚಿಗಟೇರಿ ಜಿಲ್ಲಾಸ್ಪತ್ರೆಯ ಅಧೀಕ್ಷಕ ಜಯಪ್ರಕಾಶ್, ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ನಟರಾಜ್ ಮತ್ತಿತರರು ಹಾಜರಿದ್ದರು.

## ಕೊಟ್ಟೂರು: ಹ್ಯಾಳ್ಯಾ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ನ ರಾಘವೇಂದ್ರ



ಕೊಟ್ಟೂರು, ಫೆ.4 - ಕೊಟ್ಟೂರು ತಾಲ್ಲೂಕು ಹ್ಯಾಳ್ಯಾ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಪಿ.ಹೆಚ್.ಆರ್. ರಾಘವೇಂದ್ರ, ಉಪಾಧ್ಯಕ್ಷರಾಗಿ ಶಿಲ್ಪ ಆಚಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಪಿ.ಹೆಚ್. ದೊಡ್ಡರಾಮಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್, ಪಿ.ಹೆಚ್.ಆರ್. ಬಸವರಾಜ್, ಪರಮೇಶ್ವರಯ್ಯ ಯುವ ಮುಖಂಡರಾದ ಪಿ.ಕೆ. ಇಂದ್ರಜಿತ್, ಆಕರ್ಷ್, ರವಿ ಕುಮಾರ್, ಬುಲ್ ಶ್ರೀನಿವಾಸ್ ಸದಸ್ಯರಾದ ಡಿ ಹಾಲಮ್ಮ ಡಿ.ನಾಗೇಶ್, ಎಲ್. ಚಂದ್ರನಾಯ್ಕ್, ವಸಂತಕುಮಾರ್, ನಾಗೇಶ್, ಶಿಲ್ಪ ಕೊಟ್ರೇಶ್ ಹಾಜರಿದ್ದರು.

## ಯುವ ಕಾಂಗ್ರೆಸ್ ಪದಾಧಿಕಾರಿಗಳಿಗೆ ಸನ್ಮಾನ



ದಾವಣಗೆರೆ, ಫೆ.4 - ಜಿಲ್ಲಾ ಯುವ ಕಾಂಗ್ರೆಸ್ ಚುನಾವಣೆಯಲ್ಲಿ ಅಧ್ಯಕ್ಷರಾಗಿ ನಿಖಿಲ್ ಕೊಂಡಜ್ಜಿ, ಉಪಾಧ್ಯಕ್ಷರಾಗಿ ಎಲ್.ಎಂ.ಎಚ್. ಸಾಗರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ರಂಜಿತ್ ಹೊನ್ನಳ್ಳಿ, ಖಾಲಿದ್ ಪೈಲ್ವಾನ್, ವಾಜಿದ್ ಮೊಹಮ್ಮದ್, ಸಾಧಿಕ್ ಸದ್ದಾಮ್ , ದಾವಣಗೆರೆ ದಕ್ಷಿಣ ಅಧ್ಯಕ್ಷರಾಗಿ ಸೈಯದ್ ಇರ್ಫಾನ್, ದಾವಣಗೆರೆ ಉತ್ತರ ಅಧ್ಯಕ್ಷರಾಗಿ ಮಹಮ್ಮದ್ ರಫೀಕ್ , ಹರಿಹರ ಬ್ಲಾಕ್ ಅಧ್ಯಕ್ಷರಾಗಿ ಫಯಾಜ್ ಅಹ್ಮದ್ ಆಯ್ಕೆಯಾಗಿದ್ದಾರೆ. ಅವರುಗಳನ್ನು ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ಹೆಚ್.ಜೆ. ಮೈನುದ್ದಿನ್ ಅಭಿನಂದಿಸಿದ್ದಾರೆ.

## ಮಡಿವಾಳ ಮಾಚಿದೇವ ಜಯಂತಿ



**ಮಲೇಬೆನ್ನೂರು**

ಮಲೇಬೆನ್ನೂರು, ಫೆ. 4 - ಇಲ್ಲಿನ ಪುರಸಭೆಯಲ್ಲಿ ತುಳಿತಕ್ಕೆ ಒಳಗಾಗಿದ್ದವರ ಒಳಿತಿಗಾಗಿ ಶ್ರಮಿಸಿದ ಶಿವಶರಣ ಮಡಿವಾಳ ಮಾಚಿದೇವ ಜಯಂತಿಯನ್ನು ಆಚರಿಸಲಾಯಿತು. ಪುರಸಭೆ ಅಧ್ಯಕ್ಷರಾದ ನಾಹೀದಾ ಅಂಜುಂ ಸೈಯದ್ ಇಸ್ರಾರ್, ಉಪಾಧ್ಯಕ್ಷರಾದ ಅಂಜಿನಮ್ಮ ವಿಜಕುಮಾರ್, ಸದಸ್ಯರಾದ ಎ. ಆರೀಫ್ ಅಲಿ, ದಾದಾವಲಿ, ಬರ್ಕತ್ ಅಲಿ, ಎಂ.ಬಿ. ಫೈಜು, ಭೋವಿಕುಮಾರ್, ಫಕ್ರುದ್ದೀನ್ ಅಹ್ಮದ್, ಮುಖ್ಯಾಧಿಕಾರಿ ಧರಣೇಂದ್ರಕುಮಾರ್, ಅಧಿಕಾರಿಗಳಾದ ದಿನಕರ್, ಗುರುಪ್ರಸಾದ್, ನವೀನ್ ಮತ್ತಿತರರು ಭಾಗವಹಿಸಿ, ಮಾಚಿದೇವರಿಗೆ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಿದರು.

## ಪೋದಾರ್ ಜಂಬೋ ಶಾಲೆಯಲ್ಲಿ ಕ್ರೀಡೆ

ದಾವಣಗೆರೆ, ಫೆ. 4- ನಗರದ ಪೋದಾರ್ ಜಂಬೋ ಕಿಡ್ಸ್ ವತಿಯಿಂದ ವರ್ಚ್ಯುಯಲ್ ಫಿಟ್ ಮತ್ತು ಹೆಲ್ತಿ ಜಂಬೋ ವಾರಿಯರ್ಸ್ ಆಧಾರಿತ ಕ್ರೀಡಾ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಪ್ರಾಂಶುಪಾಲ ರಮೇಶ್ ಚಂದ್ರಪಾಂಡು, ಮುಖ್ಯೋ ಪಾಧ್ಯಾಯಿನಿ ಮೊನಾಲಿಸ್ ಸಿಂಗ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿಯರಾದ ಶ್ರೀಮತಿ ಮಂಗಳ ಮಲ್ಲಿಕಾರ್ಜುನ್, ಅನಿಶಿತ, ಕವಿತ ಕಾರ್ಯಕ್ರಮ ನಡೆಸಿಕೊಟ್ಟರು.

## ವಾಮಮಾರ್ಗ ಹಿಡಿಯುವುದು ಕಾಂಗ್ರೆಸ್ ಸಂಸ್ಕೃತಿಯೇ ಹೊರತು, ಬಿಜೆಪಿಯದ್ದಲ್ಲ





ದಾವಣಗೆರೆ, ಫೆ.4- ನಕಲಿ ದಾಖಲೆ ಸೃಷ್ಟಿಸಿ ಮತದಾರ ಪಟ್ಟಿಯಲ್ಲಿ ಸಚಿವ ಆರ್. ಶಂಕರ್ ಮತ್ತು ವಿಧಾನ ಪರಿಷತ್ ಸದಸ್ಯ ಚಿದಾನಂದಗೌಡರ ಹೆಸರು ಸೇರಿಸಲು ಮುಂದಾಗಿದೆ ಎಂಬ ಕಾಂಗ್ರೆಸ್ ಮುಖಂಡರ ಆರೋಪ ಶುದ್ಧ ಸುಳ್ಳು. ಅಲ್ಲದೇ ವಿಧಾನ ಪರಿಷತ್ ಚುನಾವಣೆ ಸಮಯದಲ್ಲಿ ವಿಧಾನ ಪರಿಷತ್ ಸದಸ್ಯ ಚಿದಾನಂದ ಗೌಡರು ತಾವುಗಳು ಗೆದ್ದು, ದಾವಣಗೆರೆ ನಿವಾಸಿಯಾಗುತ್ತೇನೆ ಎಂದು ಆಗಲೇ ಘೋಷಣೆ ಮಾಡಿದ್ದರು. ಆ ಪ್ರಕಾರ ಅವರು ಇಲ್ಲಿಯೇ ಮನೆ ಮಾಡಿ ಮತದಾರ ಪಟ್ಟಿಯಲ್ಲಿ ಹೆಸರು ಸೇರಿಸಿಕೊಳ್ಳುವುದು ಅವರ ಸಂವಿಧಾನದ ಹಕ್ಕಾಗಿರುತ್ತದೆ. ಅದನ್ನು ಪ್ರಶ್ನೆ ಮಾಡುವ ಹಕ್ಕು ಕಾಂಗ್ರೆಸ್‌ನವರಿಗಿಲ್ಲ ಎಂದು ಜಿಲ್ಲಾ ಬಿಜೆಪಿ ಕಾನೂನು ಪ್ರಕೋಷ್ಟದ ಜಿಲ್ಲಾ ಸಂಚಾಲಕರಾದ ಹೆಚ್. ದಿವಾಕರ್, ರಾಜ್ಯ ಸಮಿತಿ ಸದಸ್ಯ ಎ.ಸಿ. ರಾಘವೇಂದ್ರ, ಕೆ.ಹೆಚ್. ಧನಂಜಯ್, ಎ.ಎಸ್. ಮಂಜುನಾಥ್ ತಿಳಿಸಿದ್ದಾರೆ.

ವಾಮಮಾರ್ಗದ ಸಂಸ್ಕೃತಿ ಕಾಂಗ್ರೆಸ್‌ನದ್ದೇ ಹೊರತು ಬಿಜೆಪಿಯವರದ್ದಲ್ಲ. ಏಕೆಂದರೆ ಈ ಹಿಂದೆ ಇಲ್ಲಿನ ನಿವಾಸಿಗಳಲ್ಲದ ವಿಧಾನ ಪರಿಷತ್ ಸದಸ್ಯರಾದ ಕೆ.ಸಿ. ಕೊಂಡಯ್ಯ, ರಘು ಆಚಾರ್, ಹೆಚ್.ಎಂ. ರೇವಣ್ಣ, ಮೋಹನ್ ಕೊಂಡಜ್ಜಿ ಅವರುಗಳ ಹೆಸರನ್ನು ಅಕ್ರಮ ದಾಖಲೆ ಸೃಷ್ಟಿಸಿ ಮತದಾರರ ಪಟ್ಟಿಯಲ್ಲಿ ಸೇರಿಸಿದ್ದು ಕಾಂಗ್ರೆಸ್‌ನವರು ಎಂದು ದೂರಿದರು.

ವಿಧಾನ ಪರಿಷತ್ ಸದಸ್ಯರ ಹೆಸರುಗಳನ್ನು ಒಳಗೊಂಡ ಮತದಾರ ಪಟ್ಟಿಯ ಬಗ್ಗೆ, ಬೇರೆಯವರ ಕಡೆಯಿಂದ ಕೊಡಿಸಿದ ದೂರಿನ ವಿಚಾರಣೆ ನಡೆದು ಅದರ ಬಗ್ಗೆ ಈಗಾಗಲೇ ಮತದಾರ ನೋಂದಣಿ ಅಧಿಕಾರಿಗಳು ತೀರ್ಪನ್ನು ನೀಡಿರುತ್ತಾರೆ. ಹೀಗಿದ್ದರೂ ಸಹ ವಿನಾಕಾರಣ ಅಧಿಕಾರಿಗಳ ಮೇಲೆ ಆರೋಪ ಮಾಡುತ್ತಿರುವುದು ವಿಪರ್ಯಾಸ ಎಂದಿದ್ದಾರೆ.

ಅಲ್ಲದೇ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಅವರು ತಮ್ಮ ವಾರ್ಡಿನಲ್ಲಿ ವಾಸಿಸದೇ ಇರುವ ಸುಮಾರು 1000-1500 ಮತದಾರರು 16ನೇ ವಾರ್ಡ್‌ನಲ್ಲಿ ವಾಸಿಸದೇ ಇದ್ದರೂ ಮತದಾರರಾಗಿದ್ದು, ಅವರುಗಳ ಹೆಸರನ್ನು ತೆಗೆದು ಹಾಕದಂತೆ ನೋಡಿಕೊಂಡಿರುತ್ತಾರೆ. ಅದನ್ನು ಈಗಾಗಲೇ ಭಾರತ ಚುನಾವಣೆ ಆಯೋಗ, ರಾಜ್ಯ ಚುನಾವಣೆ ಆಯೋಗಕ್ಕೆ ದೂರು ನೀಡಲಾಗಿದ್ದು, ಆ ಪ್ರಕಾರ ತನಿಖೆ ನಡೆಯುತ್ತಿದೆ ಎಂದು ದಿವಾಕರ್ ಮತ್ತಿತರರು ವಿವರಿಸಿದ್ದಾರೆ.

## ತಹಶೀಲ್ದಾರ್ ಸಹಿ ನಕಲು : ಆರೋಪ

ದಾವಣಗೆರೆ, ಫೆ.4- ಚನ್ನಗಿರಿ ತಹಶೀಲ್ದಾರ್ ಅವರ ಸೀಲು ಹಾಗೂ ಸಹಿಗಳನ್ನು ಕೆಲ ಮಧ್ಯವರ್ತಿಗಳು ನಕಲು ಮಾಡಿದ್ದು, ಕ್ರಮ ಕೈಗೊಳ್ಳುವಂತೆ ಕಬ್ಬಳ ಗ್ರಾಮದ ಪವನ್ ರಾಜ್ ಪವಾರ್ ಪೊಲೀಸರನ್ನು ಆಗ್ರಹಿಸಿದ್ದಾರೆ.

ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಚನ್ನಗಿರಿ ತಾಲ್ಲೂಕಿನ ಕಸಬಾ ಹೋಬಳಿ ವ್ಯಾಪ್ತಿಯ ಎನ್.ಗಾಣದಗಟ್ಟೆ ಬಳಿ ಅರಣ್ಯ ಇಲಾಖೆಗೆ ಸೇರಿದ ಭೂಮಿಯನ್ನು ಪಡೆಯಲು 242ಕ್ಕೂ ಹೆಚ್ಚು ಜನರು ತಹಶೀಲ್ದಾರ್ ಅವರ ಸಹಿ, ಹಾಗು ಸೀಲನ್ನು ನಕಲು ಮಾಡುವ ಮೂಲಕ ಹುನ್ನಾರ ನಡೆಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಹರೀಶ್ ಹಳ್ಳಿ, ವೀರಾಚಾರ್, ಬಸವರಾಜ್ ಗುಡಿಹಳ್ಳಿ ಉಪಸ್ಥಿತರಿದ್ದರು.

## ಸತ್ತವರ ಹೆಸರಿಗೆ ಖಾತ್ರಿ ಹಣ ಜಮಾ : ಕ್ರಮಕ್ಕೆ ಆಗ್ರಹ

**ಹೂವಿನಹಡಗಲಿ**

ಹೂವಿನಹಡಗಲಿ, ಫೆ.2- ತಾಲ್ಲೂಕಿನ ನಂದಿಹಳ್ಳಿ ಗ್ರಾಮ ಪಂಚಾಯ್ತಿ ಅಧಿಕಾರಿಗಳು, ಮೃತಪಟ್ಟಿರುವ ಕೂಲಿಕಾರರಿಗೆ ಉದ್ಯೋಗಖಾತ್ರಿಯ ಕೂಲಿ ಹಣವನ್ನು ಅವರ ಖಾತೆಗೆ ಜಮಾ ಮಾಡಿ ಕರ್ತವ್ಯಲೋಪ ಎಸಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಗ್ರಾಮ ಪಂಚಾಯ್ತಿ ಸದಸ್ಯ ಕಂಠಿ ವೀರೇಶ್ ಮೇಲಾಧಿಕಾರಿಗಳಿಗೆ ಸಲ್ಲಿಸಿದ ದೂರಿನಲ್ಲಿ ಆಗ್ರಹಿಸಿದ್ದಾರೆ.

ಮುದೇನೂರು ಗ್ರಾಮದ ಪಿ. ಹುಸೇನಾಬೀ ಕೋಂ ಫಕ್ಕೀರಸಾಬ್ ಕಳೆದ 2019 ರಲ್ಲಿಯೇ ಮರಣ ಹೊಂದಿದ್ದು, ಬಚ್ಚಲಗುಂಡಿ ಕಾಮಗಾರಿಯಲ್ಲಿ 14.9.2020 ರಿಂದ 18 ರವರೆಗೆ ಕೂಲಿ ಕೆಲಸಕ್ಕೆ ಬಂದಿದ್ದಾರೆಂದು ಹಾಜರಿ ಹಾಕಿ ಕೂಲಿ ಹಣವನ್ನು 2,850, ಸಾಮಗ್ರಿ ವೆಚ್ಚ 9,427 ರೂಪಾಯಿ ಮೊತ್ತವನ್ನು ಸೋಗಿಯ ಗ್ರಾಮೀಣ ಬ್ಯಾಂಕಿನ ಖಾತೆಗೆ ಜಮಾ ಮಾಡಲಾಗಿದೆ.

ಈ ಹಿಂದೆ ತಾವು ಸದರಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದಾಗ ಇದೇ ರೀತಿ ಪ್ರಮಾದವನ್ನು ಎಸಗಿದ್ದ ಅಂದಿನ ಗ್ರಾಮ ಪಂಚಾಯ್ತಿ ಪಿಡಿಓ ಮತ್ತು ನಾನು ಸಹಿ ಮಾಡಿದ್ದರಿಂದ ನಮ್ಮ ಮೇಲೆ ಪ್ರಕರಣವನ್ನು ದಾಖಲಿಸಲಾಗಿತ್ತು. ತಾಲ್ಲೂಕು ಪಂಚಾಯ್ತಿ ಇ.ಓ. ಸೋಮಶೇಖರ್ ಎರಡನೇ ರುಜುವನ್ನು ಮಾಡಿದ್ದಾರೆ. ಹಾಗಾಗಿ ಮೇಲಾಧಿಕಾರಿಗಳು ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ವೀರೇಶ್ ಒತ್ತಾಯಿಸಿದ್ದಾರೆ.

## ಪಾಲಿಕೆ ಆಯುಕ್ತರಿಂದ ಲಕ್ಷ್ಮಿ ಲೇಔಟ್ ನಾಗರಿಕ ಮೂಲ ಸೌಲಭ್ಯ ವೀಕ್ಷಣೆ



ದಾವಣಗೆರೆ, ಫೆ. 4 - ನಗರದ ಲಕ್ಷ್ಮಿ ಲೇಔಟ್ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಆಯೋಜಿಸಿದ್ದ ಲೇಔಟ್ ವೀಕ್ಷಣೆ ಕಾರ್ಯಕ್ರಮಕ್ಕೆ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಮತ್ತು ಸಿಬ್ಬಂದಿ ವರ್ಗದವರು ಆಗಮಿಸಿ, ಸೌಲಭ್ಯ ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಲೇಔಟ್‌ನಲ್ಲಿ ಪಾರ್ಕ್, ರಸ್ತೆಗಳನ್ನು ಸರಿಪಡಿಸಲು ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರಲ್ಲದೇ, ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆ, ವಿದ್ಯುತ್ ದೀಪಗಳನ್ನು ಅಳವಡಿಸಲು ಭರವಸೆ ಕೊಟ್ಟರು.

ಲಕ್ಷ್ಮಿ ಲೇಔಟ್ ನಾಗರಿಕ ಹಿತರಕ್ಷಣಾ ವೇದಿಕೆಯ ಪ್ರಧಾನ ಕಾರ್ಯದರ್ಶಿ ತೆಲಿಗಿ ಮಂಜುನಾಥ್, ಅಧ್ಯಕ್ಷ ಹೆಚ್.ಎಸ್. ರಾಮಕೃಷ್ಣ, ಕಾರ್ಯದರ್ಶಿ ಜಯಣ್ಣ, ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆ ಕಾರ್ಯದರ್ಶಿ ಬಸವರಾಜ್ ಸಾಗರ್, ಕಾರ್ಯಾಧ್ಯಕ್ಷ ದುರುಗೇಶ್, ಗೌರವಾಧ್ಯಕ್ಷ ಸುಭಾಶ್ಚಂದ್ರ, ಉಪಾಧ್ಯಕ್ಷ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಭದ್ರತಾ ಪಡೆಯಿಂದ ಬಸ್ ವಾಪಸ್ ಪಡೆದ ಸರ್ಕಾರ

ನವದೆಹಲಿ, ಫೆ. 4 – ದೆಹಲಿಯಲ್ಲಿ ಪೊಲೀಸರು ಹಾಗೂ ಅರೆ ಸೇನಾ ಪಡೆಗಳ ಕಾರ್ಯನಿರ್ವಹಣೆಗೆ ಒದಗಿಸಲಾಗಿದ್ದ ಬಸ್‌ಗಳನ್ನು ದೆಹಲಿ ಸರ್ಕಾರ ವಾಪಸ್ ಪಡೆದಿದೆ. ವಿಶೇಷ ಬಾಡಿಗೆಯ ಮೇರೆಗೆ ಈ ಬಸ್‌ಗಳನ್ನು ನೀಡಲಾಗಿತ್ತು.

ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವುದರ ಹಿನ್ನೆಲೆಯಲ್ಲಿ ದೆಹಲಿಯ ಕೇಜ್ರಿವಾಲ್ ಸರ್ಕಾರದ ಕ್ರಮ ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ಬಸ್‌ಗಳನ್ನು ಪೊಲೀಸರು ಹಾಗೂ ಅರೆ ಸೇನಾ ಪಡೆಗಳನ್ನು ನಗರದ ವಿವಿಧೆಡೆ ನಿಯೋಜಿಸಲು ಬಳಸಲಾಗುತ್ತಿತ್ತು.

576 ಬಸ್‌ಗಳನ್ನು ಪೊಲೀಸರು ಹಾಗೂ ಅರೆ ಸೇನಾ ಪಡೆಗಳಿಗೆ ಒದಗಿಸಲಾಗಿತ್ತು. ಇವುಗಳ ಪೈಕಿ 360 ಬಸ್‌ಗಳನ್ನು ವಾಪಸ್ ಪಡೆಯಲಾಗಿದೆ. ಉಳಿದ 216 ಬಸ್‌ಗಳು ಭದ್ರತಾ ಸಿಬ್ಬಂದಿ ಬಳಿ ಇರಲಿವೆ ಎಂದು ದೆಹಲಿ ಸಂಚಾರ ನಿಗಮದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

## ನಗರದಲ್ಲಿ ಇಂದು ಕಾರ್ಮಿಕರ ಹಕ್ಕುಗಳ ವೇದಿಕೆ ಉದ್ಘಾಟನೆ

ದಾವಣಗೆರೆ, ಫೆ.4- ಕಾರ್ಮಿಕರ ಹಕ್ಕುಗಳ ವೇದಿಕೆಯು ನಗರದ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ನಾಳೆ ದಿನಾಂಕ 5 ರಂದು ಶುಕ್ರವಾರ ಬೆಳಿಗ್ಗೆ 11.30 ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ವಕೀಲ ಗೋಪಾಲನಾಯ್ಕ ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವೇದಿಕೆಯ ರಾಷ್ಟ್ರೀಯ ಸಂಚಾಲಕ ಪಾವಗಡ ಶ್ರೀರಾಮ್ ವೇದಿಕೆಯ ಜಿಲ್ಲಾ ಶಾಖೆಗೆ ಚಾಲನೆ ನೀಡಲಿದ್ದಾರೆ. ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಷಡಾಕ್ಷರಮುನಿ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

ಅತಿಥಿಗಳಾಗಿ ಡಾ. ಶಾಮನೂರು ಶಿವಶಂಕರಪ್ಪ, ಶಾಮನೂರು ಮಲ್ಲಿಕಾರ್ಜುನ್, ಎಸ್.ಎಸ್. ಗಣೇಶ್, ಜಿ.ಎಂ.ಸಿದ್ದೇಶ್ವರ, ಎ. ನಾರಾಯಣಸ್ವಾಮಿ, ಎಸ್.ಎ. ರವೀಂದ್ರನಾಥ್, ಹೆಚ್. ಆಂಜನೇಯ, ಡಾ. ಹೆಚ್. ವಿಶ್ವನಾಥ್, ಬಿ.ಜಿ. ಅಜಯ್‌ಕುಮಾರ್, ಮಹಾಂತೇಶ್ ಬೀಳಗಿ, ಹನುಮಂತರಾಯ, ಎಂ. ಬಾಬು, ಪ್ರೊ. ಲಿಂಗಣ್ಣ, ವಿಶ್ವನಾಥ ಮುದಜ್ಜಿ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಕಾರ್ಮಿಕರ ಹಕ್ಕುಗಳ ವೇದಿಕೆ ಜಿಲ್ಲಾಧ್ಯಕ್ಷ ಎಸ್. ರಮೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್. ಪ್ರದೀಪ್‌ಕುಮಾರ್, ಜಿಲ್ಲಾ ಉಪಾಧ್ಯಕ್ಷ ಎಂ. ರಮೇಶ್, ಜಿಲ್ಲಾ ಖಜಾಂಚಿ ಎಂ. ಪ್ರವೀಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಹುಬ್ಬಳ್ಳಿ - ಧಾರವಾಡ ಬೈಪಾಸ್ ಬಳಿ ರಸ್ತೆ ಅಪಘಾತದಿಂದ ಮೃತಪಟ್ಟವರ ಕುಟುಂಬಗಳಿಂದ ರಸ್ತೆ ಸುರಕ್ಷತಾ ಜಾಥಾ

ದಾವಣಗೆರೆ, ಫೆ.4- ಹುಬ್ಬಳ್ಳಿ - ಧಾರವಾಡ ಬೈಪಾಸ್ ಬಳಿ ಈಚೆಗೆ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರು ಹಾಗೂ ಸ್ನೇಹಿತರು, ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲು ಹಾಗೂ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ನಾಡಿದ್ದು ದಿನಾಂಕ 6ರಂದು ತಮ್ಮ ಸ್ವಂತ ವಾಹನಗಳ ಮೂಲಕ ಅಪಘಾತ ಸ್ಥಳವಾದ ಇಟಿಗಟ್ಟಿಗೆ ಜಾಥಾ ಹೊರಡಲಿದೆ.

ನಾಡಿದ್ದು ದಿನಾಂಕ 6ರ ಬೆಳಿಗ್ಗೆ ನಗರದ ಐಎಂಎ ಹಾಲ್ ನಿಂದ 50ಕ್ಕೂ ಹೆಚ್ಚು ಕಾರುಗಳ ಮೂಲಕ ಜಾಥಾ ಹೊರಟು, ಬೆಳಿಗ್ಗೆ 10 ಗಂಟೆಗೆ ಅಪಘಾತದ ಸ್ಥಳ ತಲುಪಲಾಗುವುದು ಎಂದು ಅಪಘಾತದಲ್ಲಿ ಮೃತಪಟ್ಟ ಶ್ರೀಮತಿ ಪ್ರೀತಿ ರವಿಕುಮಾರ್ ಅವರ ಪತಿ - ಆರ್ಕೆ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ರವಿಕುಮಾರ್ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಅವರ ಆತ್ಮಕ್ಕೆ ಶಾಂತಿ ಕೋರಲಾಗುವುದು. ಮುಂದಿನ ದಿನಗಳಲ್ಲಿ ಇಂತಹ ದುರ್ಘಟನೆಗಳು ನಡೆಯದಂತೆ ಜನತೆಯಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು, ಅಪಘಾತ ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸರ್ಕಾರ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಒಳಸಾರಿಗೆ ಇಲಾಖೆಯನ್ನು ಒತ್ತಾಯಿಸಿ, ಅಲ್ಲಿನ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಅವರು ಹೇಳಿದರು.

ಬೈಪಾಸ್ ರಸ್ತೆ ಬಹುತೇಕ ಚತುಷ್ಪಥ, ಷಟ್ಪಥ ರಸ್ತೆಯಾಗಿದ್ದು, ಹುಬ್ಬಳ್ಳಿ-ಧಾರವಾಡ ಬೈಪಾಸ್ ಮಾತ್ರ ದ್ವಿಪಥವಾಗಿದೆ. ಈ ರಸ್ತೆ ಸಾವಿನ ಹೆದ್ದಾರಿ ಯಾಗಿದೆ.

ಅಪಘಾತ ತಡೆಯಲು ರಸ್ತೆಯನ್ನು ವಿಸ್ತರಿಸಬೇಕು ಎಂದವರು ಸರ್ಕಾರವನ್ನು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಟೇಶ್, ಸಿದ್ಧು, ಚಂದ್ರಶೇಖರ್, ಡಾ.ರಮೇಶ್, ವಿನಯ್ ಹಾಗು ಚಂದ್ರು ಇತರರು ಉಪಸ್ಥಿತರಿದ್ದರು.

## ರಾಮ ಮಂದಿರಕ್ಕೆ ಇಂದ್ರಪ್ಪ ಗೌಡ್ರು 1 ಲಕ್ಷ ರೂ. ದೇಣಿಗೆ



ದಾವಣಗೆರೆ, ಫೆ. 4 - ಶ್ರೀ ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್ ಮಾಲೀಕ ಮತ್ತು ಬಿಜೆಪಿ ಮುಖಂಡರೂ ಆದ ಇಂದ್ರಪ್ಪ ಗೌಡ್ರು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಮಂದಿರ ನಿರ್ಮಾಣಕ್ಕೆ ಒಂದು ಲಕ್ಷದ ಒಂದು ಸಾವಿರ ರೂ.ಗಳನ್ನು ಅಭಿಯಾನದ ಪ್ರಮುಖ ಡಾ. ಶ್ರೀಪತಿ ಅವರಿಗೆ ನೀಡಿದರು. ಈ ಸಂದರ್ಭದಲ್ಲಿ ಜಿ.ಪಂ.ನ ಲಿಂಗರಾಜ್, ಮಧು, ಮಹದೇವಪ್ಪ, ಡಿಸಿ ಮೋಹನ್, ನವೀನ್ ಇತರರು ಹಾಜರಿದ್ದರು.

# ಮೇಯರ್ ಚುನಾವಣೆಗೆ ಮತ ಚಲಾಯಿಸಿದರೆ ಶಂಕರ್ ಸಚಿವ ಸ್ಥಾನ ಕಳೆದುಕೊಳ್ಳಲಿದ್ದಾರೆ

ದಾವಣಗೆರೆ, ಫೆ.4- ಮುಂಬರುವ ಮಹಾನಗರ ಪಾಲಿಕೆ ಮೇಯರ್-ಉಪ ಮೇಯರ್ ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ಹೆಸರು ಸೇರ್ಪಡೆ ಮಾಡಿಕೊಂಡಿರುವ ಸಚಿವ ಆರ್. ಶಂಕರ್ ಮತ ಚಲಾಯಿಸಿದ್ದೇ ಆದರೆ, ತಮ್ಮ ಸಚಿವ ಸ್ಥಾನವನ್ನು ಕಳೆದುಕೊಳ್ಳಲಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿಗಷ್ಟೇ ನವೀಕೃತ ಗೊಂಡ ರಾಣೇಬೆನ್ನೂರು ಮತದಾರರ ಪಟ್ಟಿಯಲ್ಲಿ ಸಚಿವ ಆರ್.ಶಂಕರ್ ಅವರ ಹೆಸರಿದೆ. ದಾವಣಗೆರೆಯ ಮತದಾರರ ಪಟ್ಟಿಯಲ್ಲೂ ಹೆಸರು ಸೇರಿಸಲಾಗಿದೆ. ಒಬ್ಬ ಮತದಾರನ ಹೆಸರು ಎರಡು ಕಡೆ ಇದ್ದರೆ ಅದು ಅನೂರ್ಜಿತವಾಗುತ್ತದೆ. ಶಂಕರ್ ಇಲ್ಲಿ ಮತ ಚಲಾಯಿಸಿದರೆ ಅವರು ಸಚಿವ ಸ್ಥಾನವನ್ನೂ ಕಳೆದುಕೊಳ್ಳಬೇಕಾಗುತ್ತದೆ ಎಂದು ಪ್ರತಿಪಾದಿಸಿದರು.

ಇನ್ನು ತುಮಕೂರು ಕ್ಷೇತ್ರದ ಚಿದಾನಂದಗೌಡ ಅವರ ಹೆಸರನ್ನೂ ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಅವರ ಬಗ್ಗೆಯೂ ಮಾಹಿತಿ ಪಡೆಯುತ್ತೇವೆ. ಯಾವ ಕಾರಣಕ್ಕೂ ಮೇಯರ್ ಚುನಾವಣೆ ಯಲ್ಲಿ ಬಿಜೆಪಿ ವಾಮ ಮಾರ್ಗದಿಂದ ಅಧಿಕಾರ ಪಡೆಯಲು ಬಿಡುವುದಿಲ್ಲ. ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತೇವೆ ಎಂದು ಅವರು ತಿಳಿಸಿದರು.



ವಿಧಾನ ಪರಿಷತ್ ಸದಸ್ಯರ ಹೆಸರುಗಳನ್ನು ಮತದಾರ ಪಟ್ಟಿಯಿಂದ ತೆಗೆದು ಹಾಕಲು ಕ್ರಮ ಕೈಗೊಳ್ಳಬೇಕೆಂದು ಪಾಲಿಕೆ ಕಾಂಗ್ರೆಸ್ ಸದಸ್ಯರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು.

ಎಲ್ಲಾ ಕಾನೂನು ಬಾಹಿರ ಕೆಲಸಗಳಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರೇ ಕಾರಣ ಎಂದು ಆರೋಪಿಸಿದ ಬಸವರಾಜ್, ಬಿಜೆಪಿ ಮುಖಂಡರ ಮಾತು ಕೇಳಿ, ಸಂವಿಧಾನ ಬಾಹಿರವಾಗಿ ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸುವ ಅಧಿಕಾರಿಗಳು ಖಂಡಿತಾ ಶಿಕ್ಷೆಗೆ ಗುರಿಯಾಗಲಿದ್ದಾರೆ ಎಂದು ಅವರು ಎಚ್ಚರಿಸಿದರು.

ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ಮಾತನಾಡಿ, ಅಂತಿಮ ಮತದಾರರ ಪಟ್ಟಿ ನೀಡಲು ಸತಾಯಿಸಿದ ಅಧಿಕಾರಿಗಳು ಗುರುವಾರ ಪ್ರತಿಭಟನೆ ನಡೆಸಿದ ನಂತರ ನೀಡಿದ್ದಾರೆ. ಆರ್.ಶಂಕರ್ ಹಾಗೂ ಚಿದಾನಂದಗೌಡ ಅವರ ಹೆಸರುಗಳನ್ನು ತರಾತುರಿಯಲ್ಲಿ ಸೇರಿಸಿ ಪ್ರಾದೇಶಿಕ ಆಯುಕ್ತರಿಗೆ ಕಳುಹಿಸಲಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯರು ಸಂಚಾರಿ ಮತದಾರರಾಗಿದ್ದಾರೆ. ದಾವಣಗೆರೆ ಮೇಯರ್ ಚುನಾವಣೆ ವೇಳೆ ಪಟ್ಟಿಯಲ್ಲಿ ಹೆಸರು ಸೇರಿಸಿ ಮತ ಚಲಾಯಿಸಿ. ಮುಂದಿನ ದಿನ ಮತ್ತೊಂದು ಜಿಲ್ಲೆಯ ಚುನಾವಣೆಯಲ್ಲಿ ಮತ ಚಲಾಯಿಸಲು ಹೊರಡುತ್ತಾರೆ. ಇದಕ್ಕೆ ಆಸ್ಪದ ನೀಡಬಾರದು. ಅನ್ಯ ಜಿಲ್ಲೆಯ ಎಲ್ಲಾ ವಿಧಾನ ಪರಿಷತ್ ಸದಸ್ಯರ ಹೆಸರುಗಳನ್ನೂ ಮತದಾರರ ಪಟ್ಟಿಯಿಂದ ತೆಗೆಯುವಂತೆ ಆಗ್ರಹಿಸಿ ಹೋರಾಟ ಮುಂದುವರೆಸುತ್ತೇವೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ದೇವರಮನೆ ಶಿವಕುಮಾರ್, ಅಬ್ದುಲ್ ಲತೀಫ್, ಮುಖಂಡರಾದ ಎಸ್. ಮಲ್ಲಿಕಾರ್ಜುನ್, ಜಬ್ಬಾರ್, ಸುಭಾನ್, ಉದಯ ಕುಮಾರ್, ಶಿವಕುಮಾರ್, ರಾಜಾ ಭಕ್ಷಿ ಹಾಗು ಇತರರು ಉಪಸ್ಥಿತರಿದ್ದರು.

## ಜಗಳೂರು ಸ್ಫೋಟಕ ಪತ್ತೆ ಪ್ರಕರಣ

### ತನಿಖೆಯಿಂದ ಸತ್ಯಾಸತ್ಯತೆ ಹೊರಬೀಳಲಿದೆ : ಐಜಿಪಿ



ಜಗಳೂರು, ಫೆ.4- ತಾಲ್ಲೂಕಿನಲ್ಲಿ ಪತ್ತೆಯಾಗಿರುವ ಸಿಡಿಮದ್ದು ಪ್ರಕರಣದಲ್ಲಿ ತನಿಖೆಯಿಂದ ಸತ್ಯಾಸತ್ಯತೆ ಹೊರಬೀಳಲಿದೆ. ಎಂದು ಪೂರ್ವ ವಲಯ ಐಜಿಪಿ ರವಿ ಹೇಳಿದರು.

ತಾಲ್ಲೂಕಿನ ತಾಯಿಟೋಣಿ-ಹುಚ್ಚವ್ವನಹಳ್ಳಿ ಮಾರ್ಗದ ಹೊರ ವಲಯದ ಜಮೀನಿನಲ್ಲಿ ಎರಡು ಗೋದಾಮುಗಳಲ್ಲಿ ಸಂಗ್ರಹಿಸಿದ್ದ ಕಲ್ಲು ಕ್ವಾರಿ ಸಿಡಿಮದ್ದು ಸಂಗ್ರಹಣೆಯನ್ನು ಉಪವಿಭಾಗಾಧಿಕಾರಿ ನೇತೃತ್ವದ ತಂಡ ಜಪ್ತಿ ಮಾಡಿತ್ತು.

ಗುರುವಾರ ಸ್ಥಳಕ್ಕೆ ಆಗಮಿಸಿದ ಐಜಿಪಿ ಹಾಗೂ ಎಸ್‌ಪಿ ನೇತೃತ್ವದ ಪೊಲೀಸ್ ತಂಡ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ನಂತರ ಮಾಧ್ಯಮದವರೊಂದಿಗೆ ಮಾಹಿತಿ ನೀಡಿದರು.

ಈಗಾಗಲೇ ಉಪವಿಭಾಗಾಧಿಕಾರಿಗಳ ತಂಡ ಕೊಠಡಿಗಳನ್ನು ವಶಕ್ಕೆ ಪಡೆದಿದ್ದು , ಇಲ್ಲಿ ನೆಲಮಾಳಿಗೆ ಇರುವ ಬಗ್ಗೆ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ಕಾನೂನು ನಿಯಮ ಉಲ್ಲಂಘನೆಯಾಗಿದ್ದಲ್ಲಿ ಅಥವಾ ಯಾರದೇ ಕೈವಾಡವಿದ್ದರೂ ತನಿಖೆಯಿಂದ ನಿಖರ ಮಾಹಿತಿ ದೊರೆಯಲಿದ್ದು, ಸಾರ್ವಜನಿಕರು ಆತಂಕ ಪಡುವುದು ಬೇಡ ಎಂದು ತಿಳಿಸಿದರು.

ಜನವರಿ 21 ರಂದು ನಡೆದಿರುವ ಶಿವಮೊಗ್ಗ ಸ್ಫೋಟದ ಘಟನೆಗೂ ಹಾಗೂ ಇಲ್ಲಿ ದೊರೆತಿರುವ ಸ್ಫೋಟಕಗಳ ಸಂಗ್ರಹಕ್ಕೂ ಸಂಬಂಧವಿದೆ ಎಂಬ ಶಂಕೆ ವ್ಯಕ್ತವಾಗಿದ್ದು, ಪ್ರಕರಣದ ಕುರಿತು ತನಿಖೆಗಾಗಿ ಆಗಮಿಸಿದ್ದೇವೆ ಎಂದು ಅವರು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ , ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ್, ಪೊಲೀಸ್ ವೃತ್ತ ನಿರೀಕ್ಷಕ ಡಿ. ದುರುಗಪ್ಪ ಹಾಗೂ ಇನ್ನಿತರೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

## 19 ಸಾವಿಗೆ ಲಸಿಕೆ ಕಾರಣವಲ್ಲ : ಕೇಂದ್ರ

ನವದೆಹಲಿ, ಫೆ. 4 – ಹತ್ತೊಂಭತ್ತು ಆರೋಗ್ಯ ಕಾರ್ಯಕರ್ತರ ಸಾವಿಗೆ ಕೊರೊನಾ ಲಸಿಕೆ ಕಾರಣವಲ್ಲ. ಆ ರೀತಿಯ ಯಾವುದೇ ಸಾಕ್ಷಿಗಳು ಇದುವರೆಗೂ ದೊರೆತಿಲ್ಲ ಆರೋಗ್ಯ ಪರಿಣಿತರ ಜೊತೆ ಚರ್ಚಿಸಿದ ನಂತರ ಎಲ್ಲ ವಿವರಗಳನ್ನು ಬಹಿರಂಗ ಪಡಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಜನವರಿ 16ರಿಂದ ಲಸಿಕೆ ಅಭಿಯಾನ ಆರಂಭಿಸಲಾಗಿದೆ. ಮೊದಲ ಸುತ್ತಿನಲ್ಲಿ ಆರೋಗ್ಯ ಕಾರ್ಯಕರ್ತರು ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತಿದೆ. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಈ ಬಗ್ಗೆ ವಿವರ ನೀಡಿರುವ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಶೀಘ್ರದಲ್ಲೇ 19 ಸಾವುಗಳ ಕುರಿತ ವಿವರಗಳನ್ನು ಬಹಿರಂಗ ಪಡಿಸಲಾಗುವುದು ಎಂದಿದ್ದಾರೆ.

## ಇಲೆವೆನ್ ಕ್ರಿಕೆಟ್ ಬ್ರದರ್ಸ್‌ನಿಂದ ಕ್ರಿಕೆಟ್ ಪಂದ್ಯಾವಳಿ



ದಾವಣಗೆರೆ,ಫೆ.4- ನಗರದ ಮಾತಾ ಅಮೃತಾನಂದಮಯಿ ಶಾಲಾ ಮೈದಾನದಲ್ಲಿ ಮೊನ್ನೆ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ದಾವಣಗೆರೆ ಇಲೆವೆನ್ ಪ್ರಥಮ ಸ್ಥಾನ ಗಳಿಸಿದರೆ, ದಾವಣಗೆರೆ ಇಲೆವೆನ್ ಬ್ರದರ್ಸ್ ದ್ವಿತೀಯ ಸ್ಥಾನ ಪಡೆದಿದೆ. ದೇವನಗರಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ ಹಾಗೂ ಇಲೆವೆನ್ ಕ್ರಿಕೆಟ್ ಬ್ರದರ್ಸ್ ಇವರ ಜಂಟಿ ಆಶ್ರಯದಲ್ಲಿ ಸಮಾಜದ ಯುವ ಮುಖಂಡ ಶ್ರೀನಿವಾಸ್ ದಾಸಕರಿಯಪ್ಪ ಅವರ ಹುಟ್ಟುಹಬ್ಬದ ಅಂಗವಾಗಿ ಈ ಪಂದ್ಯ ಏರ್ಪಾಡಾಗಿತ್ತು.

ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ದಾವಣಗೆರೆ ಇಲೆವೆನ್ ಬ್ರದರ್ಸ್ ತಂಡದ ನಾಯಕ ಆರ್. ಚಂದ್ರಶೇಖರ್ ಹಾಗೂ ಮುಕ್ತಿಯಾರ್ ಅವರುಗಳು ಟ್ರೋಫಿ ಪಡೆದುಕೊಂಡರು.

ನಗರ ಪಾಲಿಕೆ ಮಾಜಿ ಸದಸ್ಯ ಶಿವನಳ್ಳಿ ರಮೇಶ್, ಶ್ರೀನಿವಾಸ್ ದಾಸಕರಿಯಪ್ಪ, ಉದ್ಯಮಿ ಕೆ.ಎಸ್. ರಮೇಶ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

## ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಇಂದು



ದಾವಣಗೆರೆ - ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿಯ ನೂತನ ದೇವಸ್ಥಾನ ಮತ್ತು ಮೂರ್ತಿ ಪ್ರತಿಷ್ಠಾಪನಾ ವಾರ್ಷಿಕೋತ್ಸವವು ಇಂದು ನಡೆಯ ಲಿದೆ. ಬೆಳಿಗ್ಗೆ 5 ಗಂಟೆಗೆ ವಿನಾ ಯಕ ಪೂಜೆ, ಪುಣ್ಯಾಹವಾಚನ, ಕಲಾ ಹೋಮ, ನವದುರ್ಗಾ ಹೋಮ, ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗವಿದೆ.

## 24 ರಂದು ಮೇಯರ್ ಚುನಾವಣೆ

ದಾವಣಗೆರೆ,ಫೆ.4- ದಾವಣಗೆರೆ ಮಹಾನಗರ ಪಾಲಿಕೆಯ ಮಹಾಪೌರ ಮತ್ತು ಉಪ ಮಹಾಪೌರರ ಸ್ಥಾನಗಳಿಗೆ ಇದೇ ದಿನಾಂಕ 24ರ ಬುಧವಾರ ಬೆಳಿಗ್ಗೆ 11 ಕ್ಕೆ ಪಾಲಿಕೆ ಸಭಾಂಗಣದಲ್ಲಿ ಚುನಾವಣೆ ನಡೆಯಲಿದೆ ಎಂದು ಪ್ರಾದೇಶಿಕ ಆಯುಕ್ತ ನವೀನ್ ರಾಜ್ ಸಿಂಗ್ ತಿಳಿಸಿದ್ದಾರೆ.

## ಫೆ.13ರಿಂದ ಎರಡನೇ ಸುತ್ತಿನ ಲಸಿಕೆ

ನವದೆಹಲಿ, ಫೆ. 4 – ಆರೋಗ್ಯ ಕಾರ್ಯಕರ್ತರಿಗೆ ಫೆಬ್ರವರಿ 13ರಿಂದ ಎರಡನೇ ಸುತ್ತಿನಲ್ಲಿ ಕೊರೊನಾ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಇದುವರೆಗೂ 45.93 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ ಎಂದು ಹೇಳಿದ್ದಾರೆ. ಮಧ್ಯಪ್ರದೇಶ, ರಾಜಸ್ಥಾನ, ತ್ರಿಪುರ, ಮಿಜೋರಾಂ, ಲಕ್ಷದ್ವೀಪ, ಒಡಿಶಾ, ಕೇರಳ, ಹರಿಯಾಣ, ಬಿಹಾರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ಉತ್ತರ ಪ್ರದೇಶಗಳಲ್ಲಿ ಶೇ.50ಕ್ಕೂ ಹೆಚ್ಚು ಜನರಿಗೆ ಲಸಿಕೆ ನೀಡಲಾಗಿದೆ ಎಂದವರು ತಿಳಿಸಿದ್ದಾರೆ.


ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 28-1-21ರಂದು ನಿಧನರಾದ ಆತ್ಮೀಯರಾದ

ಶ್ರೀ ವೀರಸಂಗಪ್ಪ ಗೌಡ್ರು (ರಾಜು)

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

- ಬಿ. ಪ್ರಭಣ್ಣ ಮತ್ತು ಮಕ್ಕಳು ಬೇತೂರು ಟ್ರೇಡರ್ಸ್, ಎಪಿಎಂಸಿ., ದಾವಣಗೆರೆ.
- ಬೇತೂರು ಇಂಡಸ್ಟ್ರೀಸ್, ಪಿ.ಬಿ. ರೋಡ್, ದಾವಣಗೆರೆ.
- ಉಮಾಶಂಕರ್ ರೈಸ್ ಇಂಡಸ್ಟ್ರೀಸ್ (GNV)
- ಅಮರೇಶಪ್ಪ ಬಿ.ಎಂ.
- ಮಹಾದೇವಯ್ಯ, ವೀರೇಶ್ (DEP)
- ಶಿವಕುಮಾರಸ್ವಾಮಿ (SEP)
- ಕುಂದವಾಡ ವೀರಭದ್ರಪ್ಪ (S.V)
- ಹೆಚ್.ಎಂ. ಪ್ರಕಾಶ್ (HMP)
- ರಾಘವೇಂದ್ರ ಸತ್ತೂರು (HMP)
- ಪ್ರದೀಪ್‌ಕುಮಾರ್ ಜಿ.ಬಿ. ಬಸಾಪುರ (SAP)
- ಯರಗುಂಟೆ ಮಹೇಶ್ (YM)
- ಸಾಲಕಟ್ಟೆ ಸಾರಥಪ್ಪ (SS)
- ರಮೇಶ್ (AR)
- ವೀರೇಶ್ (SMV)
- ರುದ್ರೇಶ್ (CR)
- ಮಂಜಪ್ಪ ((MB)
- ಬಸವರಾಜ್ (ARB)
- ಬಸವರಾಜ್ (SB)
- ವೀರಾಚಾರಿ
- ಚಿದಾನಂದ
- ವೈ.ಆರ್. ಬಾಬು
- ಬೇತೂರು ಮಿಲ್ಲಿನ ಸಿಬ್ಬಂದಿ ವರ್ಗದವರು


## ಶೇ. 21ರಷ್ಟು ಜನರಿಗೆ ಕೊರೊನಾ ಬಂದು ಹೋಗಿದೆ

ನವದಹೆಲಿ, ಫೆ. 4- ದೇಶದ ಹತ್ತು ವರ್ಷಕ್ಕೂ ಹೆಚ್ಚಿನ ವಯೋಮಾನದವರಲ್ಲಿ ಶೇ.21ರಷ್ಟು ಜನರಿಗೆ ಕೊರೊನಾ ಸೋಂಕು ಈ ಹಿಂದೆ ಬಂದಿದೆ ಎಂಬುದು ಇತ್ತೀಚಿನ ಐ.ಸಿ.ಎಂ.ಆರ್. ಸೆರೋ ಸಮೀಕ್ಷೆಯಿಂದ ತಿಳಿದು ಬಂದಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಐ.ಸಿ.ಎಂ.ಆರ್. ಕಳೆದ ಡಿಸೆಂಬರ್ 7ರಿಂದ ಜನವರಿ 8ರ ನಡುವೆ ಸೆರೋ ಸಮೀಕ್ಷೆ ನಡೆಸಿತ್ತು. ಈ ಬಗ್ಗೆ ವಿವರ ನೀಡಿರುವ ಐ.ಸಿ.ಎಂ.ಆರ್. ಪ್ರಧಾನ ನಿರ್ದೇಶಕ ಡಾ. ಬಲರಾಮ್ ಭಾರ್ಗವ, ಇನ್ನೂ ದೊಡ್ಡ ಪ್ರಮಾಣದ ಜನರು ಕೊರೊನಾ ಸೋಂಕಿನ ಅಪಾಯದಲ್ಲಿದ್ದಾರೆ ಎಂದು ಹೇಳಿದ್ದಾರೆ.


28,589 ಜನರ ಸಮೀಕ್ಷೆ ನಡೆಸಲಾಗಿತ್ತು. ಇವರಲ್ಲಿ ಶೇ.21.4ರಷ್ಟು ಜನರಿಗೆ ಕೊರೊನಾ ಸೋಂಕು ಈಗಾಗಲೇ ಬಂದಿದೆ. 10ರಿಂದ 17ರ ವಯೋಮಾನದ ಶೇ.25.3ರಷ್ಟು ಜನರಿಗೆ ಈಗಾಗಲೇ ಕೊರೊನಾ ಬಂದಿದೆ ಎಂದು ಭಾರ್ಗವ ಹೇಳಿದ್ದಾರೆ. ನಗರ ಪ್ರದೇಶದ ಕೊಳಚೆ ಪ್ರದೇಶದಲ್ಲಿ ಶೇ..31.7 ಹಾಗೂ ನಗರೇತರ ಕೊಳಚೆ ಪ್ರದೇಶಗಳಲ್ಲಿ ಶೇ.26.2ರಷ್ಟು ಜನರಿಗೆ ಕೊರೊನಾ ಬಂದಿದೆ ಗ್ರಾಮೀಣ ಭಾಗದಲ್ಲಿ ಶೇ.19.1ರಷ್ಟು ಜನರಿಗೆ ಕೊರೊನಾ ಬಂದಿದೆ. 60 ವರ್ಷಕ್ಕೂ ಹೆಚ್ಚಿನ ವಯಸ್ಸಿನವರಲ್ಲಿ ಶೇ.23.4ರಷ್ಟು ಜನರಿಗೆ ಕೊರೊನಾ ಬಂದಿದೆ ಎಂದವರು ಹೇಳಿದ್ದಾರೆ.

7,171 ಆರೋಗ್ಯ ಕಾರ್ಯಕರ್ತರ ತಪಾಸಣೆ ಮಾಡಲಾಗಿದೆ. ಅವರ ಪೈಕಿ ಶೇ.25.7ರಷ್ಟು ಜನರಿಗೆ ಕೊರೊನಾ ಸೋಂಕು ಬಂದಿರುವುದು ಕಂಡು ಬಂದಿದೆ ಎಂದು ಐ.ಸಿ.ಎಂ.ಆರ್. ಪ್ರಧಾನ ನಿರ್ದೇಶಕರು ಹೇಳಿದ್ದಾರೆ.

21 ರಾಜ್ಯಗಳ 70 ಜಿಲ್ಲೆಗಳ 700 ಗ್ರಾಮಗಳು ಇಲ್ಲವೇ ವಾರ್ಡುಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಮೊದಲ ಹಾಗೂ ಎರಡನೇ ಸಮೀಕ್ಷೆ ನಡೆಸಿದ ಸ್ಥಳಗಳಲ್ಲೇ ಮೂರನೇ ಸಮೀಕ್ಷೆ ನಡೆಸಲಾಗಿತ್ತು.

ದೇಶದಲ್ಲೀಗ ನಡೆಸಲಾಗುತ್ತಿರುವ ಪರೀಕ್ಷೆಗಳಲ್ಲಿ ಕೊರೊನಾ ಸೋಂಕು ಕಂಡು ಬರುವ ಪ್ರಮಾಣ ಶೇ.1.82ರಷ್ಟಿದೆ. ಕಳೆದ ಮೂರು ವಾರಗಳಲ್ಲಿ 47 ಜಿಲ್ಲೆಗಳಲ್ಲಿ ಯಾವುದೇ ಹೊಸ ಸೋಂಕು ಕಂಡು ಬಂದಿಲ್ಲ. ಇದೇ ಅವಧಿಯಲ್ಲಿ 251 ಜಿಲ್ಲೆಗಳಲ್ಲಿ ಯಾವುದೇ ಸಾವು ಸಂಭವಿಸಿಲ್ಲ.


12ನೇ ವರ್ಷದ ಪುಣ್ಯಸ್ಮರಣೆ



ದಿ|| ಎಲ್.ಎಸ್. ಪ್ರಸನ್ನಕುಮಾರ್

ಲಿಂಗದಹಳ್ಳಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಇವರು ನಮ್ಮನ್ನಗಲಿ ಇಂದಿಗೆ (06-02-2021) ಹನ್ನೆರಡು ವರ್ಷಗಳಾದವು. ಕಾಲಚಕ್ರದಂತೆ ಉರುಳಿದ ವರ್ಷ - ನಿಮ್ಮ ನೆನಪಲ್ಲೆ ಕಳೆದವು ವರ್ಷ ನಿಮ್ಮ ಆದರ್ಶಮಯ ದಾರಿಯಲ್ಲೇ ನಡೆದೆವು ಕ್ಷಣಕ್ಷಣ ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ

ಶ್ರೀಮತಿ ಲಲಿತ ಶಿವಮೂರ್ತಿ, ಶ್ರೀಮತಿ ಪುಷ್ಪ ಪ್ರಸನ್ನಕುಮಾರ್ ಎಲ್. ಸಿದ್ಧಾರ್ಥ ಪ್ರಸನ್ನಕುಮಾರ್, ಶ್ರೀಮತಿ ನೀಲು ಸಿದ್ಧಾರ್ಥ ಶ್ರೀಮತಿ ನಿರ್ಮಲ ಮಾರ್ಗದ ಪ್ರಕಾಶ್ ಮತ್ತು ಮಕ್ಕಳು ಡಾ|| ಪ್ರೇಮ ಮತ್ತು ಇಂ|| ಎಲ್.ಎಸ್. ಪ್ರಭುದೇವ್ ಮತ್ತು ಮಕ್ಕಳು ಶ್ರೀಮತಿ ರತ್ನಮ್ಮ ಸದಾಶಿವಪ್ಪ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು, ಗೌತ್ರ ವಂಶಸ್ಥರು. ಲಿಂಗದಹಳ್ಳಿ



ದಾವಣಗೆರೆ ಜಿಲ್ಲೆಯ ಪ್ರಸಿದ್ಧ ವಿಶ್ವಾಸಾರ್ಹ ಚಿನ್ನಾಭರಣ ಮತ್ತು ಜವಳಿ ಅರಮನೆ



ಶ್ರೀಮತಿ ಪುಷ್ಪಾ ಶ್ರೀ ಸಿ.ಕೆ. ಸಿದ್ದಪ್ಪ

ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯರು ಹಾಗೂ ಸಂಸ್ಥಾಪಕರು

ಸಂಸ್ಥಾಪಕರ 70ನೇ ಹುಟ್ಟುಹಬ್ಬದ ಪ್ರಯುಕ್ತ

ನಮ್ಮದು ನ್ಯಾಯಯುತವಾದ ಉಡುಗೊರೆ. ಹೋಲಿಕೆ ಮಾಡಿ ನೀವೇ ನಿರ್ಧಾರ ತೆಗೆದುಕೊಳ್ಳಿ.

| | PURITY | | VALUE AUDITION |
|---|---|---|---|
| ANTIQUE BANGALES | 91.60 | + | 10% VA |
| ANTIQUE NECKLACE | 91.60 | + | 10% VA |
| ANTIQUE LONG NECKLACE | 91.60 | + | 10% VA |
| ANTIQUE 'U' SHAPE HARA | 91.60 | + | 10% VA |
| ANTIQUE VANKI | 91.60 | + | 10% VA |
| ANTIQUE BAJU BANDI | 91.60 | + | 10% VA |
| MANGAL SUTHRA | 91.60 | + | 10% VA |
| SHORT MANGAL SUTHRA | 91.60 | + | 10% VA |
| DAILY WEAR BANGALES | 91.60 | + | 10% VA |
| NECK CHAINS | 91.60 | + | 10% VA |
| BRACELETS | 91.60 | + | 10% VA |
| BABY BANGALES | 91.60 | + | 10% VA |
| TOPS JUMKI | 91.60 | + | 10% VA |
| FINGER RINGS | 91.60 | + | 10% VA |
| EAR RINGS | 91.60 | + | 10% VA |
| MATIL | 91.60 | + | 10% VA |
| CHOWKER | 91.60 | + | 10% VA |
| CORAL PEARL, JEDA & RUBY HARA | 91.60 | + | 10% VA |

NO WASTAGE, NO MAKING CHARGES. 10% VA ONLY

ಆಭರಣ ಗ್ರಾಹಕರೆಲ್ಲರೂ ಈ ಅತ್ಯುತ್ತಮ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ನಿಮ್ಮಲ್ಲಿ ಮನಸಾರೆ ಕೋರಿಕೊಳ್ಳುತ್ತಿದ್ದೇವೆ.

ಪ್ರತಿ 5.00 ಗ್ರಾಂ ತೂಕದ 91.60 ಹಾಲ್‌ಮಾರ್ಕ್ ಆಭರಣಗಳ ಮೇಲೆ 10% ತಯಾರಿಕಾ ಶುಲ್ಕ ಮಾತ್ರ.




ಕುಮಾರ ಜ್ಯೂಯಲರ್ಸ್ & ಜವಳಿ ಶಾಪ್

ಮಂಡಿಪೇಟೆ, ದಾವಣಗೆರೆ-1.

☎ 08192-270329 99640 88991, 88612 05481





ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ

ದಾವಣಗೆರೆ ನಗರದ ಜನತೆಗಾಗಿ ಮಹಾನಗರ ಪಾಲಿಕೆಯ ಸೇವೆಗಳು ಮತ್ತು ಸೌಲಭ್ಯಗಳನ್ನು ನಿಮ್ಮ ಮನೆ ಬಾಗಿಲಿಗೆ ನೀಡುವ ಕಾರ್ಯಕ್ರಮವನ್ನು ಮಹಾಪೌರರಾದ

ಶ್ರೀ ಬಿ.ಜಿ. ಅಜಯ್‌ಕುಮಾರ್

ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ವಿಶೇಷ ಕಾರ್ಯಕ್ರಮದ ಸದುಪಯೋಗವನ್ನು 34 ನೇ ವಾರ್ಡಿನ ಸಮಸ್ತ ನಾಗರಿಕರು ಪಡೆದುಕೊಳ್ಳಬೇಕೆಂದು ವಿನಂತಿಸುತ್ತೇವೆ.



ಶ್ರೀ ಬಿ.ಜಿ. ಅಜಯ್ ಕುಮಾರ್

ಪೂಜ್ಯ ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.

ದಿನಾಂಕ : 05-02-2021, ಶುಕ್ರವಾರ
ಸಮಯ : ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ
ಸ್ಥಳ : ಶ್ರೀ ದುರ್ಗಾಂಬಿಕಾ ಶಾಲೆ ಶಿವಕುಮಾರ ಸ್ವಾಮಿ ಬಡಾವಣೆ ದಾವಣಗೆರೆ.



ಶ್ರೀ ಮಂಜುನಾಥ್ ಎಸ್.

ಸದಸ್ಯರು, 34ನೇ ವಾರ್ಡ್ ಮಹಾನಗರ ಪಾಲಿಕೆ, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte